ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 20
೧೬ ಮಾರ್ಚಿ ೧೯೫೮
*
ಪುಟ ೧೦ ಬೆಲೆ: ೧೩ ನ. ಪೈಸೆ
★

ಭೂಸುಧಾರಣೆಗೆ ಕಾಂಗ್ರೆಸ್ ಪಿ.ಎಸ್.ಪಿ. ವಿರೋಧ

ಮೈಸೂರು ರಾಜ್ಯದ ಭೂಸುಧಾರಣೆಯ ಬಗ್ಗೆ ಜತ್ತಿ ಸಮಿತಿಯು ಮಾಡಿರುವ ವರದಿಯ ಮೇಲೆ ಮೈಸೂರು ವಿಧಾನ ಪರಿಷತ್ತಿನಲ್ಲಿ ನಾಲ್ಕು ದಿನಗಳ ಚರ್ಚೆಯಾಗಿದೆ. ಈಗ ಶಾಸನ ಸಭೆಯಲ್ಲಿ ಅದರ ಚರ್ಚೆ ನಡೆಯುತ್ತಿದೆ.

ವಿಧಾನ ಪರಿಷತ್ತಿನ ಚರ್ಚೆ ನೋಡಿದರೆ ಪ್ರತಿಗಾಮಿಗಳ ಒತ್ತಾಯ ಬಲವಾಗಿರುವುದು ಕಂಡು ಬರುತ್ತದೆ. ಅನೇಕ ಕಾಂಗ್ರೆಸ್ಸಿಗರೂ, ಪಿ.ಎಸ್.ಪಿ ಯವರೂ, ಸ್ವತಂತ್ರರೂ ವರದಿಯ ಶಿಫಾರಸ್ಸುಗಳನ್ನು ವಿರೋಧಿಸಿ ಮಾತಾಡಿದ್ದಾರೆ. ಇವರ ವಾದಗಳು ಹೊಸದೇನೂ ಅಲ್ಲ. ಮೊದಲಿಂದಲೂ ಜಮೀನ್ದಾರರು ಹೂಡಿರುವ ವಾದಗಳನ್ನೇ ಅವರು ಮುಂದಿಟ್ಟಿದ್ದಾರೆ ಭೂಸುಧಾರಣೆಯಿಂದ ಆಹಾರೋತ್ಪಾದನೆ ಕಡಿಮೆಯಾಗುವುದೆಂದೂ, ನಿರುದ್ಯೋಗ ಹೆಚ್ಚುವುದೆಂದೂ ಸಮಾಜದಲ್ಲಿ ಅಲ್ಲೋಲ ಕಲ್ಲೋಲವಾಗುವುದೆಂದೂ ಬೆದರಿಕೆ ಹಾಕಿದ್ದಾರೆ. ಜಮೀನ್ದಾರರು ನಿರ್ಗತಿಕರಾಗುವರೆಂದೂ ಗೋಳಿಟ್ಟಿದ್ದಾರೆ. ಗೇಣಿಯ ಪ್ರಮಾಣದ ಬಗ್ಗೆಯೂ, ಹಿಡುವಳಿಯ ಪರಿಮಿತಿಯ ವಿಷಯದಲ್ಲೂ ಕಟುವಾಗಿ ಟೀಕಿಸಿದ್ದಾರೆ.

ಈ ರೀತಿಯಲ್ಲಿ ಜಮೀನ್ದಾರರ ಸಂಘದವರು ವಾದಿಸಿದ್ದರೆ ಆಶ್ಚರ್ಯವೇನೂ ಇರುತ್ತಿರಲಿಲ್ಲ. ಆದರೆ ಉಳುವವನೇ ಭೂಮಿಯ ಒಡೆಯನಾಗಬೇಕೆಂದೂ, ಸಮಾಜವಾದಿ ಸಮಾಜ ಸ್ಥಾಪಿಸುವೆವೆಂದೂ ಸಾರುತ್ತಿರುವ ಕಾಂಗ್ರೆಸ್ ಪ್ರಭೃತಿಗಳೇ ಜನತೆಯ ದೃಷ್ಟಿಯಿಂದ ಅಸಮರ್ಪಕವಾಗಿರುವ ಜತ್ತಿ ಸಮಿತಿಯ ವರದಿಯನ್ನು ವಿರೋಧಿಸುವುದು ನೋಡಿದರೆ ಕಾಂಗ್ರೆಸ್ ಸಂಸ್ಥೆಯ ತೀರ್ಮಾನಗಳನ್ನು ಅವರು ಎಷ್ಟರ ಮಟ್ಟಿಗೆ ಪಾಲಿಸುತ್ತಾರೆಂದು ತಿಳಿಯುತ್ತದೆ. ಯಾವ ವರ್ಗವನ್ನು ಅವರು ಪ್ರತಿಬಿಂಬಿಸುತ್ತಿದ್ದಾರೆಂಬುದನ್ನು ಪ್ರಕಟಿಸಿದಂತಾಗಿದೆ.

ಕಾಂಗ್ರೆಸ್ಸಿಗರ ಮಾತು ಹಾಗಿರಲಿ ಎಡಪಕ್ಷವೆಂದಿರುವ ಪಿ ಎಸ್.ಪಿ. ಸದಸ್ಯರೂ ಭೂಸುಧಾರಣೆಯನ್ನು ವಿರೋಧಿಸಿ ಮಾತಾಡಿರುವುದು ಶೋಚನೀಯವಾಗಿದೆ.

ಶಾಸನ ಸಭೆಯಲ್ಲಿ ಕಾಂಗ್ರೆಸ್ ಸದಸ್ಯರಾದ ಚನ್ನಬಸಪ್ಪನವರು ಈ ಸುಧಾರಣೆಗಳನ್ನು ತ್ರೀವ ವಿರೋಧಿಸಿರುತ್ತಾರೆ. ರೆವಿನ್ಯೂ ಮಂತ್ರಿಗಳಾದ ಶ್ರೀ ಎಂ. ಪಿ. ಪಾಟೀಲರು ಈ ಅಧಿವೇಶನದಲ್ಲೇ ಶಾಸನವಾಗಬೇಕೆಂದು ಹೇಳಿದ್ದರೂ ಎಷ್ಟರ ಮಟ್ಟಿಗೆ ಸದಸ್ಯರು ಅದಕ್ಕೆ ಬೆಂಬಲ ನೀಡಲಿದ್ದಾರೆಂದು ಹೇಳುವುದು ಕಷ್ಟವಾಗಿದೆ. ಭೂಸುಧಾರಣೆಯನ್ನು ವಿರೋಧಿಸುವುದರಲ್ಲಿ ಕಾಂಗ್ರೆಸ್ಸಿಗರೇ ಅಗ್ರ ಪಾತ್ರವಹಿಸುತ್ತಿರುವಾಗ ಶಾಸನ ಎಂದು ಬರುವುದೆಂಬುದನ್ನು ನಿರೀಕ್ಷಿಸುವುದೇ ಕಷ್ಟವಾಗಿದೆ. ಈ ಪರಿಸ್ಥಿತಿಯಲ್ಲಿ ಪ್ರಗತಿ ಪರವಾದಂಥಾ ಯೋಗ್ಯ ಭೂಶಾಸನ ಕೂಡಲೇ ಬರಬೇಕೆಂದು ಒತ್ತಾಯ ತರುವುದು ಸಂಘಟಿತ ರೈತರ ಮತ್ತು ಪ್ರಜಾಪ್ರಭುತ್ವವಾದಿಗಳ ಕರ್ತವ್ಯವಾಗಿದೆ.

—o—

ವಿಮಾನ ಕಾರ್ಖಾನೆ ನೌಕರರ ಹೋರಾಟ!

ವಿಮಾನ ಕಾರ್ಖಾನೆಯ ಮ್ಯಾನೇಜ್‌ಮೆಂಟ್ ಇಂದು (12—3—58) ಕಾರ್ಖಾನೆಯ ಲಾಕ್ ಔಟ್ ಅನ್ನು ತೆಗೆದಿದೆ 15 ದಿನಗಳ ನಂತರ ಲಾಕ್ ಔಟ್ ತೆಗೆಯಲಾಗಿದ್ದರೂ ಪರಿಸ್ಥಿತಿಯೇನೂ ಉತ್ತಮಗೊಂಡಿಲ್ಲ. ನೌಕರರ ಸಂಘದ ಪ್ರತಿನಿಧಿಗಳೊಂದಿಗೆ ಮ್ಯಾನೇಜ್‌ಮೆಂಟು ಸಂಧಾನ ನಡೆಸಲು ಸಿದ್ಧವಿಲ್ಲ. ಯಾವ ಸಂಧಾನವೂ ಇಲ್ಲದೆಯೇ ಕಾರ್ಖಾನೆಯನ್ನು ತೆರೆದು, ನೌಕರರ ಐಕ್ಯತೆಯನ್ನು ಮುರಿಯಲು ಮ್ಯಾನೇಜ್‌ಮೆಂಟು ನೋಡುತ್ತಿದೆ.

ಫೆಬ್ರುವರಿ 25ರಂದು ನಡೆದ ಘಟನೆಯ ನಂತರ ಕಾರ್ಖಾನೆಯನ್ನು ಲಾಕ್ ಔಟ್ ಮಾಡಿದ ಮ್ಯಾನೇಜ್‌ಮೆಂಟ್ ಕಳೆದ ಒಂದು ವಾರದಲ್ಲಿ ಸ್ವಲ್ಪಸ್ವಲ್ಪವಾಗಿ ತೆರೆದಿದ್ದು, ಇಂದಿಗೆ ಪೂರ್ಣವಾಗಿ ತೆರೆದಿದ್ದಾರೆ. ಮೂರು ಸಾವಿರದಿಂದ ನಾಲ್ಕು ಸಾವಿರದವರೆಗೆ ನೌಕರರು ಹಾಜರಿ ಇರುತ್ತಾರೆಂದೂ, ನೌಕರರು ಕೆಲಸಕ್ಕೆ ಬರಲು ಹಾತೊರೆಯುತ್ತಿರುವರೆಂದೂ ಮ್ಯಾನೇಜ್‌ಮೆಂಟ್ ಹೇಳಿಕೆಗಳ ಮೇಲೆ ಹೇಳಿಕೆಗಳನ್ನೀಯುತ್ತಿದೆ. ನೌಕರರು ಇದರಿಂದ ಮೋಸಹೋಗಲೆಂದು ಈ ಬಗೆಯ ಹೇಳಿಕೆಗಳನ್ನೀಯುತ್ತಿದೆ. ನಿಜಾಂಶವನ್ನು ಸಂಘದ ವಕ್ತಾರರುಗಳು ಹೇಳಿಕೆ ಇತ್ತು ತಿಳಿಸಿದ್ದಾರೆ. ಈಗ ಕಾರ್ಖಾನೆಗೆ ಹೋಗುತ್ತಿರುವ ಮೂರು ನಾಲ್ಕು ಸಾವಿರ ಮಂದಿ ನೌಕರರಲ್ಲಿ ಎರಡು ಸಾವಿರಕ್ಕೂ ಮಿಕ್ಕಿ ನೌಕರರು ಸೂಪರ್ ವೈಸರುಗಳು ಹಾಗೂ ವಾಚ್ ಅಂಡ್ ವಾರ್ಡ್ ಡಿಪಾರ್ಟ್‌ಮೆಂಟಿನವರೂ ಮತ್ತು ಅಗತ್ಯ ಕೆಲಸಗಳಿಗೆ ಅವಶ್ಯಕವಾದ ನೌಕರರು ಮಾತ್ರ ಇರುತ್ತಿರೆ. ಏನಾದರೂ ಒಂದು ಬಗೆಯ ತೀರ್ಮಾನವಾಗುವವರೆಗೆ ಕೆಲಸಕ್ಕೆ ಹೋಗಕೂಡದೆಂದು ನೌಕರರು ತೀರ್ಮಾನಿಸಿದ್ದಾರೆ. ಇಂಥ ಸನ್ನಿವೇಶದಲ್ಲಿ ಪ್ರಶ್ನೆಗಳನ್ನು ಇತ್ಯರ್ಥಗೊಳಿಸದೆ, ಸಮಂಜಸವಾದ ಒಪ್ಪಂದವಾಗದೆ ನೌಕರರು ಕಾರ್ಖಾನೆಗೆ ಹಿಂತಿರುಗುವರೆಂದು ತಿಳಿಯುವುದು ಮೂರ್ಖತನವಾದೀತು. ಮ್ಯಾನೇಜ್‌ಮೆಂಟಿನವರು ಇದೇ ನೀತಿಯನ್ನು ಅನುಸರಿಸಿದಲ್ಲಿ ಕೈಗಾರಿಕೆಯಲ್ಲಿ ಶಾಂತಿ ಏರ್ಪಡುವುದು ದುಃಸ್ಸಾಧ್ಯ.

ಮ್ಯಾನೇಜ್‌ಮೆಂಟಿನ ಕುಟಿಲ ನೀತಿ

ನೌಕರರ ಸಂಘಟನೆಯನ್ನು ಮುರಿಯಲು ಮ್ಯಾನೇಜ್‌ಮೆಂಟು ಹಲವಾರು ಮಾರ್ಗಗಳನ್ನು ಅನುಸರಿಸುತ್ತಿದೆ. ಸೂಪರ್ ವೈಸರುಗಳು ಮತ್ತು ವಾಚ್ ಅಂಡ್ ವಾರ್ಡ್, ಸೆಕ್ಯೂರಿಟಿ ಡಿಪಾರ್ಟ್‌ಮೆಂಟುಗಳ ಸಹಾಯದಿಂದ ನೌಕರರ ಮನೆಮನೆಗೆ

ಕಾರ್ಮಿಕರ ಐಕ್ಯತೆಯನ್ನು ಮುರಿಯಲು ಮ್ಯಾನೇಜ್‌ಮೆಂಟ್ ಯತ್ನ

ಹೋಗಿ ಅವರಿಗೆ ಬೆದರಿಕೆ ಹಾಕಿ, ಕಾರ್ಖಾನೆಗೆ ಬರುವಂತೆ ಒತ್ತಾಯಪಡಿಸುತ್ತಿದ್ದಾರೆ. ಅದರಲ್ಲೂ ಸಂಘದ ಸದಸ್ಯರಾಗಿ ಉತ್ಸಾಹದಿಂದ ದುಡಿಯುತ್ತಿರುವವರ ಮೇಲೆ ಬೆದರಿಕೆಗಳು ಹೆಚ್ಚಾಗಿವೆ. ಕೆಲಸಕ್ಕೆ ಹೋಗುವವರ ಕೈಯಲ್ಲಿ ಕರಾರು ಪತ್ರ ಒಂದಕ್ಕೆ ಸಹಿಹಾಕಿಸಿಕೊಳ್ಳಲಾಗುತ್ತಿದೆಯೆಂದು ತಿಳಿದುಬಂದಿದೆ. ಅನೇಕ ನೌಕರರು ಫ್ಯಾಕ್ಟರಿಗೆ ಸಂಬಳಕ್ಕಾಗಿ ಹೋದಾಗ ಅವರಿಗೆ ಈ ಕರಾರು ಪತ್ರಕ್ಕೆ ಸಹಿ ಹಾಕಿದರೆ ಮಾತ್ರ ಸಂಬಳ ಕೊಡುವುದಾಗಿ ತಿಳಿಸಲಾಯಿತೆಂದು ತಿಳಿದುಬಂದಿದೆ. ಅಷ್ಟೇ ಅಲ್ಲದೆ ಈಗ ಕೆಲಸಕ್ಕೆ ಹೋಗುತ್ತಿರುವ ನೌಕರರಿಗೆ ಬ್ಯಾಡ್ಜ್‌ಗಳ ಜೊತೆಗೆ ವಿಶೇಷ ಪಾಸುಗಳನ್ನು ಕೊಡಲಾಗಿದೆ. ಮ್ಯಾನೇಜ್‌ಮೆಂಟಿನವರು ಕಳೆದ ತಿಂಗಳ ಸಂಬಳವನ್ನು ನೌಕರರಿಗೆ ಇನ್ನೂ ಕೊಟ್ಟಿಲ್ಲ. ಕಾರ್ಖಾನೆಯ ಬಳಿ ನೌಕರರು ಹೋದರೆ, ಪೇರೋಲ್ ಆಫೀಸು ಒಳಗೆ ಇರುವುದರಿಂದ ಪ್ರವೇಶವಿಲ್ಲ. ಈ ವಿಷಯವನ್ನು ಮಾನ್ಯ ಕಾರ್ಮಿಕ ಮಂತ್ರಿಗಳಿಗೆ ತಿಳಿಸಿದಾಗ ಅವರು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಆಶ್ವಾಸನೆ ಇತ್ತರು. ಹಾಗೂ ಜನರಲ್ ಮ್ಯಾನೇಜರ್ ಶ್ರೀ ನಾಗೇಶ್‌ರವರು ಕಾರ್ಮಿಕ ಸಚಿವರಿಗೆ ಟೆಲಿಫೋನ್ ಮೂಲಕ, ಎಲ್ಲ ನೌಕರರಿಗೂ ಸಂಬಳವನ್ನು ತಮ್ಮ ವೆಚ್ಚದಿಂದಲೇ ಮನಿ ಆರ್ಡರ್ ಮೂಲಕ ಕಳಿಸಲಾಗುವುದೆಂದು ಮಾರ್ಚ್ 17ರಂದು ತಿಳಿಸಿದ್ದರೆಂದು ತಿಳಿದುಬಂದಿದೆ. ಆದರೆ ಈವರೆವಿಗೆ ಯಾರಿಗೂ ಸಂಬಳದ ಮನಿ ಆರ್ಡರ್ ಬಂದಿಲ್ಲವೆಂದು ತಿಳಿದುಬಂದಿದೆ. ನೌಕರರಿಗೆ ಸಂಬಳ ಕೊಡದೆ ಸತಾಯಿಸಿ, ಅವರು ಮಣಿದು, ಮ್ಯಾನೇಜ್‌ಮೆಂಟಿಗೆ ಶರಣುಹೋಗುವಂತೆ ಮಾಡುವುದೇ ಇದರ ಉದ್ದೇಶ್ಯವೆಂದು ಕಾಣಬರುತ್ತದೆ. ಕೂಡಲೇ ಮ್ಯಾನೇಜ್‌ಮೆಂಟು ಸಂಬಳ ವಿನಿಯೋಗ ಮಾಡುವಂತೆ ಸರಕಾರ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಿ.

ದಬ್ಬಾಳಿಕೆ ಮುಂದುವರಿಯುತ್ತಿದೆ

ವಿಮಾನ ಕಾರ್ಖಾನೆ ನೌಕರರ ಮೇಲೆ ದಬ್ಬಾಳಿಕೆ ಇನ್ನೂ ಮುಂದುವರಿಯುತ್ತಿದೆ. ಪೋಲೀಸು ರಾಜ್ಯ ವಿಮಾನ ಕಾರ್ಖಾನೆಯಲ್ಲಿ ಸ್ಥಾಪನೆಯಾಗಿದೆಯೆಂದು ಹೇಳಬಹುದು. ನಗರದಲ್ಲಿ 144ನೇ ವಿಧಿ ಪ್ರಕಾರ ಪ್ರತಿಬಂಧಕಾಜ್ಞೆಯನ್ನು ಇನ್ನೂ ಹತ್ತು ದಿನಗಳ ಕಾಲ ಮುಂದುವರಿಸಲಾಗಿದೆ. ನೂರಾರು ನೌಕರರ ಮೇಲೆ ಪೋಲೀಸರು ಚಾರ್ಜ್‌ಶೀಟ ಗಳನ್ನು ಹಾಕಿ ಮೊಕದ್ದಮೆ ಹೂಡಿದ್ದಾರೆ. ಸಂಘದ ಹಂಗಾಮಿ ಪ್ರಧಾನ ಕಾರ್ಯದರ್ಶಿ ಶ್ರೀ ಡೇನಿಯಲ್ ಥಿಯೋಫಿಲಸ್, ಕಾರ್ಯದರ್ಶಿ ಕೃಷ್ಣಮೂರ್ತಿ, ಮತ್ತಿತರ ಐದು ಮಂದಿಯ ಮೇಲೆ ಕ್ರಿಮಿನಲ್ ಪ್ರೊಸೀಜರ್ ಕೋರ್ಟಿನ 307ನೆ ವಿಧಿಯಂತೆ ಕೊಲೆ ಆಪಾದನೆ ಹೊರಿಸಲಾಗಿದೆ. ಈ ಆಪಾದನೆಯಲ್ಲಿ ಮೃತರಾದ ಶ್ರೀ ಪಾಂಡ್ಯನ್ ಆಚಾರಿ ಮೊದಲನೆ ಅಪರಾಧಿಯಾಗಿದ್ದಾರೆ. ದ್ವಿತೀಯ ಜಿಲ್ಲಾ ನ್ಯಾಯಾಧೀಶರು ಡೇನಿಯಲ್ ಮತ್ತಿತರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ನಿರಾಕರಿಸಿದ್ದಾರೆ.

ವಚನ ಭ್ರಷ್ಟತೆ

ಕಳೆದವಾರ ಬೆಂಗಳೂರಿಗೆ ಆಗಮಿಸಿದ್ದ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಪಾರ್ಲಿ

(೬ನೇ ಪುಟ ನೋಡಿ)

ಅಂತರ ರಾಷ್ಟ್ರೀಯ

ಶೃಂಗ ಸಮ್ಮೇಳನಕ್ಕೆ ಅಡ್ಡಿ ಯಾರು?

ಅಂತರ ರಾಷ್ಟ್ರೀಯ ಉದ್ರಿಕ್ತ ವಾತಾವರಣವು ಕಡಿಮೆಯಾಗಬೇಕು, ಶೀತ ಯುದ್ಧ ಕೊನೆಗಾಣಬೇಕು, ನಿಶ್ಶಸ್ತ್ರೀಕರಣವಾಗಿ, ಅಣುಶಸ್ತ್ರಾಸ್ತ್ರಗಳ ನಿಷೇಧವಾಗಬೇಕು, ವಿಶ್ವಶಾಂತಿ ನೆಲಸುವಂತಾಗಬೇಕು ಎಂದು ಬಯಸುವ ಎಲ್ಲ ಶಾಂತಿ ಪ್ರಿಯರೂ ಶೃಂಗ ಸಮ್ಮೇಳನ ನಡೆಯುವುದನ್ನು ಎದುರು ನೋಡುತ್ತಿದ್ದಾರೆ. ಅಂಥ ಶೃಂಗ ಸಮ್ಮೇಳನವು ಆದಷ್ಟು ಶೀಘ್ರವಾಗಿ ಸಮಾವೇಶಗೊಳ್ಳಬೇಕೆಂದು ಒತ್ತಾಯ ಪಡಿಸುತ್ತಿದ್ದಾರೆ. ಆದರೆ ಅದಕ್ಕೆ ಇಲ್ಲಸಲ್ಲದ ಅಡ್ಡಿ ಆತಂಕಗಳನ್ನು ಅಮೆರಿಕ ಮೊದಲಾದ ಪಶ್ಚಿಮ ರಾಷ್ಟ್ರಗಳು ಒಡ್ಡುತ್ತಿವೆ.

ಶೃಂಗ ಸಮ್ಮೇಳನ ನಡೆಯಬೇಕೆಂದು, ಪ್ರಮುಖ ಅಂತರ ರಾಷ್ಟ್ರೀಯ ಸಮಸ್ಯೆಗಳ ಕುರಿತು [illegible] ಚರ್ಚೆ ನಡೆದು ಬಂದು ಇತ್ಯರ್ಥಕ್ಕೆ ಬರುವಂತೆ ದಾರಿಮಾಡಬೇಕೆಂದು ಮೊದಲು ಸೂಚಿಸಿದ್ದು ಸೋವಿಯತ್ ಯೂನಿಯನ್. ಅಮೇರಿಕ, ಬ್ರಿಟನ್ ಫ್ರಾನ್ಸ್‌ಗಳು ಈ ಸಲಹೆಯನ್ನು ಮೇಲಿಂದ ಮೇಲೆ ತಿರಸ್ಕರಿಸುತ್ತಲೇ ಬಂದಿವೆ. ಕಳೆದ ಕೆಲವು ತಿಂಗಳುಗಳ ಬೆಳವಣಿಗೆಗಳ ಮೇಲೆ, ವಿಶ್ವದ ಜನಾಭಿಪ್ರಾಯದ ಮೇಲೆ, ಶೃಂಗ ಸಮ್ಮೇಳನವೊಂದು ನಡೆಯುವುದು ಸೂಕ್ತವೆಂದು ಎಲ್ಲ ರಾಷ್ಟ್ರಗಳೂ, ಅಮೇರಿಕಾ ಸಹ ಅಂಗೀಕರಿಸಿದೆ. ಶೃಂಗ ಸಮ್ಮೇಳನ ನಡೆಯಬೇಕು ಎಂಬುದನ್ನು ಒಪ್ಪಿದರೂ ಸಹ ಅದು ಯಾವಾಗ ಸೇರಬೇಕು ಎನ್ನುವುದರ ಬಗ್ಗೆ ಅನೇಕ [illegible]ವೆ.

ಸೋವಿಯತ್ ಯೂನಿಯನ್ ಜನವರಿ ೮ ರಂದು [illegible] ರಾಷ್ಟ್ರಗಳನ್ನೊಳಗೊಂಡ ಶೃಂಗ ಸಮ್ಮೇಳನವು ಎರಡು ತಿಂಗಳುಗಳಲ್ಲೇ ಸೇರಬೇಕೆಂದು ಸೂಚಿಸಿತು. ಈ ಸೂಚನೆಯನ್ನು ಪಶ್ಚಿಮ ರಾಷ್ಟ್ರಗಳು ತಿರಸ್ಕರಿಸಿದವು. ಶೃಂಗ ಸಮ್ಮೇಳನ ನಡೆಯುವುದಕ್ಕ ಮುನ್ನ ವಿದೇಶಾಂಗ ಸಚಿವರುಗಳ ಸಮ್ಮೇಳನ ನಡೆದು, ಕಾರ್ಯಕ್ರಮದ ವಿವರಗಳು ಚರ್ಚಿತವಾಗಬೇಕೆಂದು ಪಶ್ಚಿಮ ರಾಷ್ಟ್ರಗಳು ಸೂಚಿಸಿದ್ದಿತು.

ಪಶ್ಚಿಮ ರಾಷ್ಟ್ರಗಳ ಈ ಸಲಹೆಯನ್ನು ಕೂಲಂಕುಶವಾಗಿ ಪರಿಶೀಲಿಸಿ ಸೋವಿಯತ್ ಯೂನಿಯನ್ ಶಾಂತಿ ಸ್ಥಾಪನೆಯ ಹಿರಿಯ ಬಯಕೆಯಿಂದ ವಿದೇಶಾಂಗ ಸಚಿವರುಗಳ ಸಮಾವೇಶಕ್ಕೆ ಒಪ್ಪಿಗೆಯಿತ್ತು ತನ್ನ ಸಲಹೆಗಳನ್ನು ಈ ತಿಂಗಳ ಆರಂಭದಲ್ಲಿ [illegible] ಕಾರ್ಯಕ್ರಮದ ಬಗ್ಗೆ ಮಾತ್ರ ವಿದೇಶಾಂಗ ಸಚಿವರುಗಳ ಸಮಾವೇಶವು ಚರ್ಚಿಸಬೇಕೆಂದೂ, [illegible] ಸೂಚಿಸಿದ ಸೋವಿಯತ್ ಸರಕಾರದ ಈ ಸೂಚನೆಗೆ ಅನೇಕ ಕಡೆಯಿಂದ ಬೆಂಬಲ [illegible] ಆದರೆ ಅಮೆರಿಕ ಮತ್ತು [illegible] ಪಶ್ಚಿಮ ರಾಷ್ಟ್ರಗಳು ಎಂದಿನಂತೆ ತಮ್ಮ ಹಿಂದಿನ ನಿಲುವನ್ನು ಬಿಟ್ಟು ಸೋವಿಯತ್ ಸರಕಾರದ ಇತ್ತೀಚಿನ ಸಲಹೆಯನ್ನೂ ತಿರಸ್ಕರಿಸಿದೆ. ವಿದೇಶಾಂಗ ಸಚಿವರುಗಳ ಸಮಾವೇಶ ಪೂರ್ವ ಭಾವಿಯಾಗಿ ನಡೆಯಬೇಕು ಎಂದು ಹಿಂದೆ ಸೂಚಿಸುವವರೇ ಇಂದು ಕೈ ಬಿಡುತ್ತಿದ್ದಾರೆ. ಇದರಿಂದ ಅಮೆರಿಕಾ ಮತ್ತು ಪಶ್ಚಿಮ—ರಾಷ್ಟ್ರಗಳು ಎತ್ತ ಸಾಗುತ್ತಿವೆ ಎಂಬುದು ಸ್ಪಷ್ಟವಾಗುತ್ತದೆ, ಇಲ್ಲಸಲ್ಲದ ಅಡ್ಡಿಗಳನ್ನು ಹಾಕಿ ಶೃಂಗ ಸಮ್ಮೇಳನವನ್ನು ಆದಷ್ಟು ಮುಂದೂಡುವುದೇ ಅವರ ಉದ್ದಿಶ್ಯವಾಗಿದೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಬ್ರಿಟನ್ನಿನಲ್ಲಿ ಅಮೆರಿಕದ ಈ ನಿಲುವಿನ ಬಗ್ಗೆ ಕಳವಳವೆದ್ದಿದೆ. ಬ್ರಿಟಿಷ್ ಲೇಬರ್ ಪಕ್ಷದ ಮುಖಂಡರು ಡಲ್ಲೆಸ್ ಮತ್ತು ಐಕ್‌ರ ನೀತಿಯನ್ನು ಕಟುವಾಗಿ ಟೀಕಿಸಿದ್ದಾರೆ. ಬ್ರಿಟನ್ ಸರಕಾರವು ಮುಂದೆ ನಿಂತು ಸೋವಿಯತ್ ಸಲಹೆಯನ್ನು ಅಂಗೀಕರಿಸಬೇಕೆಂದು ಒತ್ತಾಯ ಪಡಿಸಿದ್ದಾರೆ. ಆದರೆ ಹಿರಿಯ ಸಾಮ್ರಾಜ್ಯಶಾಹಿ ದೇಶ ಅಮೇರಿಕದ ನಿಲುವಿಗೆ ವಿರೋಧ ಹೋಗಲು ಬ್ರಿಟಿಷ್ ಸರಕಾರ ಹಿಂಜರಿಯುತ್ತಿದೆ. ನ್ಯಾಟೋ ರಾಷ್ಟ್ರಗಳು ಆತುರದಲ್ಲಿ ಕೂಡಿ ಅಮೆರಿಕ ಸರಕಾರದ ನೀತಿಯನ್ನು ಅಂಗೀಕರಿಸಿ ಅದೇ ನಿಲುವನ್ನು ತೆಗೆದುಕೊಂಡಿದೆ.

ಸೋವಿಯತ್ ಯೂನಿಯನ್ ಶಾಂತಿ ಸ್ಥಾಪನೆಯ ಮೂಲ ಧ್ಯೇಯದಿಂದ ಪಶ್ಚಿಮ ರಾಷ್ಟ್ರಗಳ ನೀತಿಗೆ ಸಾಕಷ್ಟು ರಿಯಾಯಿತಿಯನ್ನು ತೋರಿ ಸಲಹೆಗಳನ್ನು ಮುಂದಿರಿಸಿದೆ. ವಿದೇಶಾಂಗ ಸಚಿವರುಗಳ ಸಮಾವೇಶ ಜಿನೀವದಲ್ಲಿ ನಡೆಯಬೇಕೆಂದು ಸ್ಪಷ್ಟವಾಗಿ ಸೂಚಿಸಿದೆ. ಅಮೆರಿಕದ ಅಧ್ಯಕ್ಷ ಐಸನ್ ಹೋವರ್‌ರವರು ಶೃಂಗ ಸಮ್ಮೇಳನದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಮಾಡಲು, ಸಮ್ಮೇಳನವು ಅಮೆರಿಕದ ವಾಷಿಂಗ್‌ಟನ್‌ನಲ್ಲಿ ನಡೆದಲ್ಲಿ ತನ್ನ ಅಡ್ಡಿ ಇಲ್ಲವೆಂದೂ ಸಹ ತಿಳಿಸಿದೆ. ಹೀಗಿದ್ದರೂ ಸಹ ಅಮೆರಿಕಾ ಸೋವಿಯತ್ ಸಲಹೆಯನ್ನು ತಿರಸ್ಕರಿಸಿದೆ.

ಆದಷ್ಟು ಶೀಘ್ರವಾಗಿ ಶೃಂಗ ಸಮ್ಮೇಳನ ನಡೆಯುವುದೆಂಬ ಭರವಸೆಯನ್ನು ಸೋವಿಯತ್ ಪತ್ರಿಕಾರರುಗಳು ವ್ಯಕ್ತಪಡಿಸಿದ್ದಾರೆ. ಪಶ್ಚಿಮ ರಾಷ್ಟ್ರಗಳು ತಮ್ಮ ಮೊಂಡುತನವನ್ನು ಬಿಟ್ಟು, ಈ ಮಹತ್ವಪೂರ್ಣ ಸಮಾವೇಶಕ್ಕೆ ಅನುವಾಗಲಿ ಎಂದು ಶಾಂತಿಪ್ರಿಯ ಜನತೆ ಒತ್ತಾಯ ಪಡಿಸಬೇಕಾಗಿದೆ.

ನಾಸೆರ್ ಕೊಲೆಗೆ ಸಾಮ್ರಾಜ್ಯಶಾಹಿಗಳ ಯತ್ನ

ಈಜಿಪ್ಟ್—ಸಿರಿಯಾ ರಾಷ್ಟ್ರಗಳ ಒಕ್ಕೂಟವು ಸಾಧನೆಯಾಗಿ ಸಂಯುಕ್ತ ಅರಬ್ ರಾಜ್ಯದ ಅಧ್ಯಕ್ಷರಾಗಿರುವ ನಾಸ್ಸೆರ್‌ರ ಕೊಲೆಗೆ ಸಾಮ್ರಾಜ್ಯವಾದಿಗಳು ಯತ್ನಿಸುತ್ತಿದ್ದಾರೆ. ನಾಸ್ಸೆರರ ಕೊಲೆ ಮಾಡಿ, ಈಜಿಪ್ಟ್-ಸಿರಿಯಾಗಳ ಐಕ್ಯತೆಯನ್ನು ಮುರಿದು, ತಮ್ಮ ನೆಲೆ ಸ್ಥಾಪಿಸಲು ಈ ಯತ್ನ ನಡೆದಿದೆ. ತಮ್ಮ ಉದ್ದೇಶ ಸಾಧನೆಗಾಗಿ ಸಾಮ್ರಾಜ್ಯವಾದಿಗಳು ಕೋಟ್ಯಾಂತರ ರೂಪಾಯಿಗಳನ್ನು ಚೆಲ್ಲುತ್ತಿದ್ದಾರೆ. ಈ ಅಂಶವನ್ನು ಸ್ವತಃ ನಾಸ್ಸೆರ್‌ರವರೇ ಹೊರಗೆಡವಿದ್ದಾರೆ.

ಅಮೆರಿಕದಿಂದ ಪ್ರಚೋದನೆಯಾದ ಈ ಪಿತೂರಿಯಲ್ಲಿ ಸಾವುದಿ ಅರೇಬಿಯಾ ದೊರೆಯ ಹಸ್ತವೂ ಇದೆಯೆಂದು ತಿಳಿದು ಬಂದಿದೆ. ಸಿರಿಯನ್ ಸೇನೆಯ ಅಧಿಕಾರಿಯಾದ ಕರ್ನಲ್ ಸೆರ್‍ರಾಜ್‌ರವರನ್ನು ಈ ಕೆಲಸಕ್ಕಾಗಿ ನೇಮಿಸಲಾಗಿದ್ದಿತು. ಅವರು ದೇಶ ಪ್ರೇಮದಿಂದ ಕೂಡಿದ್ದು ಸಾಮ್ರಾಜ್ಯವಾದಿಗಳ ಈ ಪಿತೂರಿಯನ್ನು ಬಯಲಿಗೆಳೆದಿದ್ದಾರೆ ಸಾವೂದಿ ಅರೇಬಿಯ ದೊರೆಯ ರಾಯಭಾರಿಯೊಬ್ಬರು ಕರ್ನಲ್ ಸೆರ್‍ರಾಜ್‌ರವರಿಗೆ ಅವರು ನಾಸ್ಸೆರ್‌ರ ಕೊಲೆಮಾಡಬೇಕೆಂದೂ ಮತ್ತು ಸೈನ್ಯದ ಮೂಲಕ ಒಳಸಂಚು ನಡೆಸಬೇಕೆಂದೂ, ಅದು ಸಫಲವಾದಲ್ಲಿ ಅಮೆರಿಕದ ಬೆಂಬಲ ಪಡೆದು ಸೆರ್‍ರಾಜ್ ಅಧಿಕಾರಕ್ಕೆ ಬರಬಹುದೆಂದೂ ಸೂಚಿಸಿದ್ದರಂತೆ. ಅಮೆರಿಕ ಸರಕಾರಕ್ಕೆ ಪೂರ್ಣವಿವರಗಳು ತಿಳಿದಿವೆಯೆಂದೂ ಹೇಳಿದ್ದರಂತೆ. ಈ ಕಾರ್ಯವನ್ನು ಯಶಸ್ವಿಯಾಗಿ ನಡೆಸಿದ್ದಲ್ಲಿ 20 ಮಿಲಿಯ ಪೌಂಡು ಹಣಕೊಡುವುದಾಗಿ ತಿಳಿಸಲಾಗಿದ್ದಿತೆಂದೂ, ಮುಂಗಡವಾಗಿ ಮಿಲಿಯ ಪೌಂಡುಗಳನ್ನು ಕೊಡಲಾಗಿತ್ತೆಂದೂ ತಿಳಿದು ಬಂದಿದೆ. ಆದರೆ ಸಾಮ್ರಾಜ್ಯವಾದಿಗಳ ಈ ಯತ್ನ ಬಯಲಾಗಿದೆ.

ಗೋಳಿಬಾರಿನ ವಿರುದ್ಧ ಖಂಡನಾ ಸಭೆಗಳು

(೩ನೇ ಪುಟದಿಂದ)

ಈವರೆಗೆ ಬಂದಿಸಿರುವವರನ್ನೆಲ್ಲ ಬಿಡುಗಡೆ ಮಾಡಬೇಕೆಂದು ಸಭೆಯು ಪರವಾಗಿ ಸರಕಾರವನ್ನು ಒತ್ತಾಯ ಪಡಿಸಿದರು. ನಂತರ ಸರ್ಕಾರದ ದೌರ್ಜನ್ಯ ನೀತಿಯನ್ನು ಖಂಡಿಸುವ, ಬಂಧಿತರನ್ನೆಲ್ಲ ಬಿಡುಗಡೆ ಮಾಡಬೇಕೆನ್ನುವ, ವಿಮಾನ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆನ್ನುವ, ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸುವ ನಿರ್ಣಯವನ್ನು ಸ್ವೀಕರಿಸಲಾಯಿತು. ಘೋಷಣೆಗಳೊಡನೆ ಸಭೆ ಮುಕ್ತಾಯವಾಯಿತು.

ಉಡುಪಿ

ತಾ. 25—2—58 ರಂದು ಬೆಂಗಳೂರಿನ ಹಿಂದೂಸ್ಥಾನ ವಿಮಾನ ಕಾರ್ಖಾನೆಯ ಕೆಲಸಗಾರರ ಮೇಲೆ ನಡೆದ ಪೋಲೀಸು ಗೋಳಿಬಾರು ಮತ್ತು ಲಾಠಿಚಾರ್ಜನ್ನು ಖಂಡಿಸಿ, ಪ್ರತಿಷೇಧ ಸೂಚಿಸುವ ಸಲುವಾಗಿ ಉಡುಪಿಯ ಮಜೂರರ ಸಂಘಗಳ ಆಶ್ರಯದಲ್ಲಿ ಸಾರ್ವಜನಿಕ ಸಭೆಯು ತಾ. 28-2-58ರಂದು ಸಂಜೆ ಬಸ್‌ಸ್ಟಾಂಡಿನ ಬಳಿಯಲ್ಲಿ ಶ್ರೀ ಡೇವಿಡ್ ಕರ್ಕಡರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀಗಳಾದ ಸಿಂಪ್ಸನ್ ಸೋನ್ಸ್ ಮತ್ತು ರಾಮ ಮೋಹನ ಹೆಗ್ಡೆಯವರು ಬೆಂಗಳೂರಿನಲ್ಲಿ ಮಜೂರರ ಮೇಲೆ ನಡೆದ ಲಾಠಿಚಾರ್ಜು ಮತ್ತು ಗೋಳಿಬಾರುಗಳನ್ನು ಖಂಡಿಸಿ, ಮೈಸೂರ ಸರಕಾರದ ಮಜೂರ ವಿರೋಧಿ ನೀತಿಯನ್ನು ಟೀಕಿಸಿ ಭಾಷಣವಿತ್ತರು.

ತಮ್ಮ ನ್ಯಾಯವಾದ ಕೇಳಿಕೆಗಳನ್ನು ಸರಕಾರದ ಮುಂದಿಡಲು ಶಾಂತಯುತರಾಗಿ ಮೆರವಣಿಗೆಯಾಗಿ ಬಂದ ಮಜೂರರ ಮೇಲೆ ಪೋಲಿಸರು ನಡೆಸಿದ ಗೋಳಿಬಾರಿನಿಂದಾಗಿ ಇಬ್ಬರು ಮೃತರಾಗಿದ್ದು ಈ ಗೋಳಿಬಾರಿನ ಕುರಿತು ಕೂಡಲೇ ನಿಷ್ಪಕ್ಷಪಾತ ವಿಚಾರಣೆಯಾಗಬೇಕು, ಮತ್ತು ಅಪರಾಧಿ ಅಧಿಕಾರಿಗಳನ್ನು ಶಿಕ್ಷಿಸಬೇಕು. ಗೋಳಿಬಾರಿನಿಂದ ಮೃತರಾದ ಮಜೂರರ ಕುಟುಂಬಗಳಿಗೆ ಸರಕಾರವು ಯೋಗ್ಯ ಪರಿಹಾರ ಕೊಡಬೇಕು. ಬೆಂಗಳೂರಲ್ಲಿ ಜಾರಿಯಲ್ಲಿರುವ 144 ಸೆಕ್ಷನನ್ನು ಹಿಂತೆಗೆದುಕೊಂಡು ಹಿಂದೂಸ್ಥಾನ ವಿಮಾನ ಕಾರ್ಖಾನೆಯನ್ನು ಪುನಃ ತೆರೆಯಬೇಕು ಎಂದು ಮುಂತಾಗಿ ಸರಕಾರವನ್ನು ಕೇಳಿಕೊಳ್ಳುವ ಠರಾವುಗಳು ಮಂಜೂರಾದವು.

ಸಭೆಗೆ ಮೊದಲು ಮಜೂರರ ಮೆರವಣಿಗೆಯು ನಗರ ಸುತ್ತಾಡಿತು.

—೦—

'ಭಿಲಾಯ್' ಕಾರಖಾನೆಗಾಗಿ ಯಂತ್ರ ಕುಲುಮೆ

ಸ್ವೆರ್ಡ್‌ಲೋವ್‌ಸ್ಕ್ ನಗರದ ಊರಲ್ಸ್ ಭಾರೀ ಯಂತ್ರ ನಿರ್ಮಾಣಾಲಯವು, ಭಿಲಾಯಿಯ ಕಬ್ಬಿಣದ ಕಾರಖಾನೆಯ ಸಲುವಾಗಿ ಮೂರನೆಯ ಕುಲುಮೆಯ ಯಂತ್ರಪರಿಕರಗಳನ್ನು ಕಳಿಸಲಾರಂಭಿಸಿದೆ. ಗತವರ್ಷದಲ್ಲಿ ಈಗಾಗಲೇ ಇಲ್ಲಿಂದ ಎರಡು ಊದು ಕುಲುಮೆಗಳನ್ನು ಭಾರತ ದೇಶಕ್ಕೆ ಕಳಿಸಿದ್ದಾಗಿದೆ.

—"ತಾಸ್"

ಬಿಜಾಪುರದಲ್ಲಿ ಜಾತೀಯ ದಂಗೆ

ಮುಂದಾಳುಗಳು ಬೆಂಕಿ ಹಚ್ಚಿ ಅಡಗಿ ಕೂತರು!

ಬಿಜಾಪುರದ ಇತಿಹಾಸದಲ್ಲಿಯೇ ನಡೆಯದಂಥಾ ಘಟನೆ ಶುಕ್ರವಾರ ತಾರೀಕು 7—3—58ರಂದು ನಗರದಲ್ಲಿ ಘಟಿಸಿತು. ಕ್ಷುಲ್ಲಕ ಕಾರಣದ ಸಲುವಾಗಿ ಹಿಂದೂ—ಮುಸಲ್ಮಾನರೊಳಗೆ ದಂಗೆಯಾಗಿ ನಗರದ ವಾತಾವರಣವೆಲ್ಲ ಕಲುಷಿತವಾಯಿತು. ಎರಡೂ ಜಾತಿಯೊಳಗೆ ದ್ವೇಷ ಭಾವನೆ ಮನೆಮಾಡಿಕೊಂಡಿತು.

6—3—58ನೇ ದಿವಸ ಸಂಜೆ 4 ಗಂಟೆಗೆ ಲಿಂಗಾಯತ ಹೆಣ್ಣುಮಗಳ ಶವ ಒಯ್ಯುತ್ತಿರುವಾಗ ಮಸೀದಿಯ ಮುಂದೆ ವಾದ್ಯ ಬಾರಿಸಿದರೆಂಬ ಕಾರಣದಿಂದ ಶಹಾಪುರ ಅಗಸಿಯಲ್ಲಿ ಜಗಳವಾಯಿತು. ಕಲ್ಲು ತೂರಲ್ಪಟ್ಟು ಜನರಿಗೆ ಘಾಯವಾಯಿತು. ಈ ಜಗಳ ನೋಡಿ ಪೋಲೀಸ ಪಡೆ ಕರೆಸಲಾಯಿತು. ಫೌಜದಾರರು ಪೋಲೀಸ ಪಡೆ ತಂದರೂ ಕೂಡ ಜಗಳ ನಡೆಯುತ್ತಿರುವುದನ್ನು ನೋಡಿ ಪೋಲೀಸ ವ್ಯಾನದಿಂದ ಕೆಳಗೆ ಇಳಿಯಲಿಲ್ಲ. ಜಗಳ ತೀರಿಸಲು ಪ್ರಯತ್ನ ಮಾಡಲಿಲ್ಲ. ಪೋಲೀಸ ಕಚೇರಿಗೆ ಬಂದು ಲೇಖಿ ತಕ್ರಾರ ಅರ್ಜಿ ಕೊಡಿರೆಂದು ಹೇಳಿ ಹೋಗಿಬಟ್ಟರು. ಫೌಜದಾರನ ಈ ಕೃತಿಯಿಂದ ಸಿಟ್ಟಿಗೆದ್ದು ಲಿಂಗಾಯಿತ ಗುರುಗಳಾದ ಶ್ರೀ ಭೋಜಯ್ಯ ಸ್ವಾಮಿಯವರು ಕೂಡಲೇ ಉಪವಾಸ ಕೈಗೊಂಡರು. ಮುಸಲ್ಮಾನರ ಮತ್ತು ಪೋಲೀಸರ ಕೃತಿಯನ್ನು ಖಂಡಿಸುವುದರ ಸಲುವಾಗಿ ಮರುದಿವಸ ಹರತಾಳದಿಂದ ಪರಿಸ್ಥಿತಿ ಕೆಡುತ್ತದೆಂದು ಎಷ್ಟೋ ಮಂದಿ ಹೇಳಿದರೂ ಕೇಳದೆ ಹರತಾಳಕ್ಕೆ ಕರೆ ಕೊಡಲಾಯಿತು. ಜಾತೀಯವಾದಿಗಳು ಈ ಘಟನೆಯ ಲಾಭ ಪಡೆದರು. ಶುಕ್ರವಾರ ದಿನಸ ಮುಂಜಾನೆ "ಮುಸಲ್ಮಾನ್ ಲೋಗ್ ಪಾಕಿಸ್ತಾನ್ ಜಾವೋ" ಎಂದು ಘೋಷಣೆ ಹೊಡೆಯುತ್ತಾ ಊರಲ್ಲೆಲ್ಲಾ ಮೆರವಣಿಗೆ ತೆಗೆಯಲಾಯಿತು. ಜನರಿಗೆ ತಿಳಿಸಿ ಹೇಳಿ ಈ ಮೆರವಣಿಗೆಯನ್ನು ಬಂದು ಮಾಡಲಾಯಿತು. ಮತ್ತೆ ಈ ಜನರೆಲ್ಲ ಶಹಾಪುರ ಅಗಸಿಯಿಂದ ಮೆರವಣಿಗೆ ತೆಗೆದು, ಮುಸಲ್ಮಾನರ ಮನೆ, ಅಂಗಡಿಗಳಿಗೆ ಕಲ್ಲು ತೂರುತ್ತ, ಮನೆ—ಅಂಗಡಿಗಳ ಬಾಗಲ ಮುರಿಯುತ್ತ ಹೆಂಗಸರ ಮೇಲೆ ಅತ್ಯಾಚಾರ ಮಾಡುತ್ತ ಕಾಯಿಪಲ್ಲೆ ಮಾರ್ಕೆಟಿಗೆ ನುಗ್ಗಿ ಅಲ್ಲಿ ಲೂಟಿ ಮಾಡ ಹತ್ತಿದಾಗ, ಬಾಗವಾನ ಜನರೆಲ್ಲ ಒಗ್ಗಟ್ಟಾಗಿ ಅವರನ್ನು ಎದುರಿಸಿದರು. ಲಾಠಿ-ಕಲ್ಲುಗಳಿಂದ ಬಡಿದಾಟವಾಗಿ ಎಷ್ಟೋ ಜನರಿಗೆ ಗಾಯಗಳಾದುವು. ಇಷ್ಟೆಲ್ಲಾದರೂ ಊರಲ್ಲಿ ಪೋಲೀಸ ಬಂದೋಬಸ್ತ ಇಲ್ಲ. ಕಲೆಕ್ಟರ, ಡಿ. ಎಸ್. ಪಿ., ಡಿ. ವ್ಯಾ. ಎಸ್. ಪಿ. ಯಾರೂ ಊರೊಳಗಿಲ್ಲ. ಹೋಮ ಇನ್ಸ್ಪೆಕ್ಟರರು ನಾಲ್ಕು ಪೋಲೀಸರೊಡನೆ ಮೆರವಣಿಗೆಯ ಜೊತೆಯಲ್ಲಿ ಹೊರಟಿದ್ದರು. ಹೆಚ್ಚು ಪೋಲೀಸರನ್ನು ತರಿಸಿ ದಂಗೆಯನ್ನು ತಡೆಹಿಡಿಯಿರೆಂದು, ಮೆರವಣಿಗೆಯಲ್ಲಿದ್ದ ಜನರನ್ನು ಸಮಾಧಾನಗೊಳಿಸುತ್ತಿದ್ದ ಎ. ಕೆ. ಉಪಾಧ್ಯಾಯರು ಹಲವಾರು ಸಲ ಹೋಮ್ ಇನ್ಸ್ಪೆಕ್ಟರರಿಗೆ ಹೇಳಿದ ನಂತರ ಸಶಸ್ತ್ರ ಪೋಲೀಸರನ್ನು ಕರೆಸಲಾಯಿತು. ಕಾಯಿಪಲ್ಲೆ ಮಾರ್ಕೆಟಿನ ಸುತ್ತ ಪೋಲೀಸರನ್ನಿಡಲಾಯಿತು. ಕಮ್ಯೂನಿಸ್ಟ ಪಾರ್ಟಿಯ ಕಾರ್ಯಕರ್ತರೆಲ್ಲ ಮುಂಜಾನೆ 10 ಗಂಟೆಯಿಂದ ಸಂಜೆ 6 ಗಂಟೆಯ ವರೆಗೆ ಸತತವಾಗಿ ನಡೆಯುತ್ತಿದ್ದ ದಂಗೆಯಲ್ಲಿ ಎಲ್ಲಾ ಕಮ್ಯೂನಿಸ್ಟ ಪಾರ್ಟಿಯ ಕಾರ್ಯಕರ್ತರು ಶಾಂತಿ ಸಾಧನೆಯ ಸಲುವಾಗಿ ದುಡಿಯುತ್ತಿದ್ದರು. ಇವರ ಜೊತೆಯಲ್ಲಿ ಕಾಂಗ್ರೆಸ್ಸಿನ ಗಣಪತಚಂದ ಶಹಾ, ಮೊದಲಾದವರೂ ಕೆಲಸ ಮಾಡುತ್ತಿದ್ದರು. ಹೋಮ ಗಾರ್ಡ ಕಮಾಂಡರರಾದ ಡಾ| ಎಚ್. ಟಿ. ಸಾಸನೂರವರೂ ಪ್ರಶಂಸನೀಯ ಕೆಲಸ ಮಾಡಿದರು. ಬಾಜಾರದಲ್ಲಿ ದಂಗೆ ಹೆಚ್ಚಾಗುತ್ತಾ ಹೋದಂತೆ ಜುಮ್ಮಾ ಮಸೂತಿಯಿಂದ 400 ಜನ ಮುಸಲ್ಮಾನರು ಹೋರಾಟಕ್ಕೆ ತಯಾರಾಗಿ ಬಾಜಾರಕ್ಕೆ ಬಂದರು. ಶ್ರೀ ದುಬೆ, ಮಹಾಲದಾರ ವಕೀಲ, ಹಾಶೀಂ ಪೀರ, ಮಕಾನದಾರ ಮೊದಲಾದವರು ಅವರನ್ನೆಲ್ಲ ಗಾಂಧಿ ಚೌಕಿನಲ್ಲಿ ತಡೆದು, ಅವರಿಗೆ ತಿಳಿಸಿ ಹೇಳಿ, ಅವರನ್ನೆಲ್ಲ ಸಮಾಧಾನ ಮಾಡಿದರು. ಮಧ್ಯಾಹ್ನ 3 ಗಂಟೆಗೆ ಮುಸಲ್ಮಾನರನ್ನೆಲ್ಲ ಸಮಾಧಾನ ಮಾಡಲಾಯಿತು. ಆದರೆ ಇತರ ಜನರನ್ನು ಚದುರಿಸಲು ಸಾಧ್ಯವಾಗಲಿಲ್ಲ. ಕಲ್ಲು ತೂರುವುದರಿಂದ ಪೋಲೀಸರಿಗೂ, ಹೋಮ ಇನ್ಸ್ಪೆಕ್ಟರರಿಗೂ ಘಾಯಗಳಾದುವು. 2 ಗಂಟೆಗೆ ಕಲಾದಗಿ ಚೌಕಿನಲ್ಲಿ ಪೋಲೀಸರ ಮೇಲೆ ಬಹಳ ಕಲ್ಲು ಬಿದ್ದಾಗ ಲಾಠಿ ಚಾರ್ಜ ಮಾಡಲಾಯಿತು. ಆದರೂ ಜನರು ಚದುರಲಿಲ್ಲ. ನಾಲ್ಕು ಗಂಟೆಗೆ ಮುನಿಸಿಪಾಲಿಟಿಯಲ್ಲಿ, ಊರ ಪ್ರಮುಖರ ಸಭೆ ಕರೆದು, ಶಾಂತಿ ಸ್ಥಾಪನೆಯ ಸಲುವಾಗಿ ಕರೆ ಕೊಡಲಾಯಿತು ಮತ್ತು ಶಹಾಪೂರ ಅಗಸಿಯ ಮುಲ್ಲಾ ಮಸೀದಿಯ ಮುಂದೆ ವಾದ್ಯ ಬಾರಿಸಬೇಕೋ ಬೇಡವೋ ಎಂಬುದನ್ನು ವಿಚಾರ ಮಾಡಿ ನಿರ್ಣಯ ಕೊಡುವುದರ ಸಲುವಾಗಿ 9 ಜನರ ಒಂದು ಸಮಿತಿ ನೇಮಿಸಲಾಯಿತು. ನಗರ ಪ್ರಮುಖರ ಈ ನಿರ್ಣಯವನ್ನು ಊರ ಜನರಿಗೆಲ್ಲ ತಿಳಿಸಿ ಹೇಳಿ, ಉಪವಾಸ ಕೂತಿದ್ದ ಶ್ರೀ ಭೋಜಯ್ಯನವರನ್ನು ಎಬ್ಬಿಸಿದ ನಂತರ ಸಂಜೆ 6 ಗಂಟೆಗೆ ದಂಗೆ ಕಡಿಮೆಯಾಗಿ ಶಾಂತ ವಾತಾವರಣ ನೆಲೆಸಿತು.

ಬಾಗವಾನರಿಗೆ ಈ ದಂಗೆಯಿಂದ ಬಹಳ ನಷ್ಟವಾಗಿದೆ. ಊರೊಳಗಿನ ಇತರ ಮುಸಲ್ಮಾನರಿಗೂ ಕಲ್ಲು ಬಿದ್ದು, ಬಾಕಿಲ ಮುರಿದು ಲುಕ್ಸಾನಾಗಿದೆ

ಈ ದಂಗೆಯಲ್ಲಿ ಮೂರು ವೈಶಿಷ್ಟ್ಯ ಕಂಡುಬಂತು. ಹರತಾಳಕ್ಕೆ ಕರೆಕೊಟ್ಟ ಒಬ್ಬ ಮುಖಂಡರೂ ಕೂಡ ಎಂಟು ತಾಸು ಒಂದೇ ಸವನೆ ದಂಗೆ ನಡೆಯುತ್ತಿದ್ದರೂ ಕೂಡ ತಮ್ಮ ಜನರನ್ನು ಸಮಾಧಾನ ಮಾಡಿ ಶಾಂತಿ ನೆಲೆಸಲಿಕ್ಕೆ ಯಾವದೇ ರೀತಿಯಲ್ಲಿ ಪ್ರಯತ್ನ ಮಾಡಲಿಲ್ಲ. ಮನಬಂದಂತೆ ವರ್ತಿಸಿರೆಂದು ಹೇಳಿರುವರೋ ಎಂಬ ಸಂಶಯ ಬರುತ್ತಿತ್ತು. ಮುಸಲ್ಮಾನರಲ್ಲಿದ್ದ ಶಿಸ್ತು ಮತ್ತು ಮುಂದಾಳುಗಳ ಮೇಲೆ ಇದ್ದ ವಿಶ್ವಾಸ 2 ಗಂಟೆಗೆ ಸುಮಾರಿಗೆ ಬಾಗವಾನರಿಗೆ ಮತ್ತು ಜುಮ್ಮಾ ಮಸೀತಿಯ ಮುಸಲ್ಮಾನರಿಗೆ ನಿಮ್ಮ ಕೈಯ್ಯಲ್ಲಿದ್ದ ಲಾಠಿಗಳನ್ನೆಲ್ಲ ಒಗೆಯಿರಿ, ನಿಮಗೆ ಧಕ್ಕೆಯಾಗದಂತೆ ನಾವು ನೋಡಿಕೊಳ್ಳುತ್ತೇವೆಂದು ಹೇಳಿದಾಗ ಬಡಬಡ ಎಲ್ಲಾ ಲಾಠಿಗಳನ್ನು ತೆಗೆದೊಗೆಯುತ್ತಿರುವಾಗಿನ ದೃಷ್ಯ ನೋಡುವಂಥಾದಿತ್ತು. ಊರಲ್ಲಿ ಈ ರೀತಿ ಗಂಭೀರವಾದ ವಾತಾವರಣವಿದ್ದರೂ ಕೂಡ ಪೋಲೀಸ ಬಂದೋಬಸ್ತು ಹಾಸ್ಯಾಸ್ಪದವಾಗಿತ್ತು.

ಪೋಲೀಸ ಖಾತೆಯ ದುರ್ಬಲತೆ ಮತ್ತು ಈ ದಂಗೆಯ ಮೂಲ ಕಾರಣವನ್ನು ಸಾರ್ವಜನಿಕ ವಿಚಾರಣಾ ಸಮಿತಿ ನೇಮಿಸಿ ವಿಚಾರಣೆ ಮಾಡಿಸಲೇ ಬೇಕು. ಯಾಕೆಂದರೆ, ಕಳೆದ ಹಲವಾರು ವರ್ಷಗಳಿಂದ ದೇಶದ ಎಷ್ಟೋ ಕಡೆಗಳಲ್ಲಿ ಹಿಂದೂ—ಮುಸಲ್ಮಾನ ದಂಗೆ ನಡೆಯುತ್ತಿದ್ದರೂ ಕೂಡ ಬಿಜಾಪುರದಲ್ಲಿ ಈ ಎರಡೂ ಜಾತಿಯವರು ಸ್ನೇಹ — ಸೌಹಾರ್ದತೆಯಿಂದಿದ್ದು, ಈ ಘಟನೆಯಿಂದಾಗಿ, ನಗರದ ವಾತಾವರಣ ಕೆಟ್ಟಿದೆ. ಇನ್ನಾದರೂ ಕೂಡ ಬಿಜಾಪುರದ ಹಿಂದೂ-ಮುಸಲ್ಮಾನರು ತಮ್ಮೊಳಗಿನ ಪ್ರೇಮ-ಸಹಕಾರವನ್ನು ಕಾಯ್ದುಕೊಂಡುಹೋಗುವುದು ಅತ್ಯಗತ್ಯ.

ಪ್ರಾಂತೀಯ ಸುದ್ದಿ ಸಂಗ್ರಹ

ಗೋಳಿಬಾರಿನ ವಿರುದ್ಧ ಖಂಡನಾ ಸಭೆಗಳು

ಬೆಂಗಳೂರು ಉತ್ತರ

ಮೈಸೂರು ಸ್ಪೋನ್‌ವೇರ್ ಪೈಪ್ಸ್ ಮತ್ತು ಪಾಟರೀಸ್ ಕೆಲಸಗಾರರು ಬುಧವಾರ ಫೆಬ್ರವರಿ 26ರಂದು ಹಿಂದೂಸ್ಥಾನ್ ವಿಮಾನ ಕಾರ್ಖಾನೆ ನೌಕರರ ಮೇಲೆ ನಡೆದ ಪೋಲಿಸರ ದಬ್ಬಾಳಿಕೆಯನ್ನು ವಿರೋಧಿಸಲು ಮಧ್ಯಾಹ್ನದ ನಂತರ ಸೌಹಾರ್ದ ಮುಷ್ಕರ ನಡೆಸಿದರು. ಕೆಲಸಗಾರರೆಲ್ಲರೂ ಮೆರವಣಿಗೆಯಲ್ಲಿ ಹೊರಟು ಚಿಕ್ಕಬಾಣಾವರದಲ್ಲಿ ಸಭೆ ನಡೆಸಿ ಈ ಕೆಳಕಂಡ ತೀರ್ಮಾನಗಳನ್ನು ಮಾಡಿದರು.

1. ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ನೌಕರರ ಶಾಂತರೀತಿ ಪ್ರದರ್ಶನದ ಮೇಲೆ ಪೋಲಿಸರು ದಬ್ಬಾಳಿಕೆ ನಡೆಸಿ ಗೋಲೀಬಾರು ಮತ್ತು ಲಾಠಿ ಚಾರ್ಜನ್ನು ನಡೆಸಿದುದನ್ನು ಈ ಸಭೆಯು ಖಂಡಿಸುತ್ತದೆ. ಈ ಸಂದರ್ಭದಲ್ಲಿ ಪೋಲೀಸರ ಗುಂಡಿಗೆ ಬಲಿಯಾಗಿ ಮೃತರಾದ ವಿಮಾನ ಕಾರ್ಖಾನೆ ನೌಕರನ ಬಗ್ಗೆ ತನ್ನ ಸಂತಾಪವನ್ನು ಸೂಚಿಸುತ್ತದೆ. ಗೋಲೀಬಾರಿನ ಪ್ರಸಂಗದ ಕುರಿತು ಸರಕಾರವು ವಿಚಾರಣೆ ನಡೆಸಬೇಕೆಂದು ಈ ಸಭೆ ಒತ್ತಾಯ ಪಡಿಸುತ್ತದೆ.

2. ನಗರದಲ್ಲಿ 144ನೇ ಸೆಕ್ಷನ್ ಜಾರಿ ಮಾಡಿ ಸಭೆ ಮೆರವಣಿಗೆಗಳು ನಡೆಸುವುದನ್ನು ನಿಷೇಧಿಸಿರುವುದನ್ನು ಈ ಸಭೆಯು ಖಂಡಿಸುತ್ತದೆ. ಮತ್ತು ಕೂಡಲೇ ಈ ನಿಷೇಧಾಜ್ಞೆಯನ್ನು ಹಿಂತೆಗೆದು ಕೊಳ್ಳಬೇಕೆಂದು ಒತ್ತಾಯ ಪಡಿಸುತ್ತದೆ.

ಪಾವಗಡ

25-2-58 ರಿಂದ ಮುನ್ನಡೆಸುತ್ತಿರುವ H.A.L. ಲಾಕ್‌ಔಟನ್ನು ಹಿಂತೆಗೆಯ ಬೇಕೆನ್ನುವ, ಕಾರ್ಮಿಕರ ಮೇಲೆ ಅಕ್ರಮವಾಗಿ ನಡೆದ ಗೋಲಿಬಾರ್ ಬಗ್ಗೆ ನ್ಯಾಯವಾದ ವಿಚಾರಣೆ ನಡೆಯಬೇಕೆನ್ನುವ, ಸತ್ತವರ ಕುಟುಂಬಕ್ಕೆ ನಷ್ಟ ಪರಿಹಾರವನ್ನು ಕೊಡಬೇಕೆನ್ನುವ, ಗೋಲಿಬಾರಿಗೆ ಸಂಬಂಧ ಪಟ್ಟ ತಪಿತಸ್ಥ ಅಧಿಕಾರಿಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಪಾವಗಡ ಕಮ್ಯೂನಿಸ್ಟ್ ಪಾರ್ಟಿಯ ಸಭೆಯು ಸರ್ವಾನುಮತದಿಂದ ಸ್ವೀಕರಿಸಿತು.

ಈ ಸಂದರ್ಭದಲ್ಲಿ ಸಂಬಂಧಿಸಿರುವವರನ್ನೆಲ್ಲಾ ಬಿಡಬೇಕೆಂದೂ, ಸರಕಾರವು ಕಾರ್ಮಿಕರ ಒಗ್ಗಟ್ಟನ್ನು ಮುರಿಯುವ ಪ್ರಯತ್ನವನ್ನು ಮಾಡದೆ, ಅನವಶ್ಯಕವಾಗಿ ಜಾರಿ ಮಾಡಿರುವ 144ನೇ ಸೆಕ್ಷನ್ನನ್ನು ಹಿಂತೆಗೆದುಕೊಳ್ಳಬೇಕೆಂದು 3-3-58ರಂದು ಸೇರಿದ ಪಾವಗಡ ತಾಲ್ಲೂಕು ಕಮ್ಯೂನಿಸ್ಟ ಪಾರ್ಟಿ ಕಮಿಟಿಯು ಒತ್ತಾಯ ಪಡಿಸಿದೆ.

ಹರಿಹರ

ತಾ. 25-2-58 ರಂದು ಮೈಸೂರು ಸರ್ಕಾರದ ಪೋಲೀಸರು ಹಿಂದುಸ್ಥಾನ ವಿಮಾನ ಕಾರ್ಮಿಕರ ಮೇಲೆ ಲಾಠಿಚಾರ್ಜ ಮಾಡಿ, ಗುಂಡು ಹಾರಿಸಿ ಒಬ್ಬ ಕಾರ್ಮಿಕನನ್ನು ಕೊಲೆಮಾಡಿ ಅನೇಕ ಕಾರ್ಮಿಕ ಮುಖಂಡರನ್ನು ಬಂಧಿಸಿ, ಕಾರ್ಮಿಕರ ಮೂಲ ಹಕ್ಕುಗಳಾದ ಸಭೆ ಮೆರವಣಿಗೆ ನಿಷೇಧಿಸಿರುವ ಸರ್ಕಾರದ ನಿರಂಕುಶ ನೀತಿ ಮತ್ತು ಪೈಶಾಚಿಕ ದಬ್ಬಾಳಿಕೆಯನ್ನು ಪ್ರತಿಭಟಿಸುವುದಕ್ಕಾಗಿ, ಮೈಸೂರು ಕಿರ್ಲೋಸ್ಕರ ಕೆಲಸಗಾರರ ಬಹಿರಂಗ ಸಭೆಯು ತಾ. 27—2—58ರಂದು ಸಂಘದ ಉಪಾಧ್ಯಕ್ಷ ಶ್ರೀ ಎಚ್. ಎಸ್. ರಾಮಚಂದ್ರರಾವ್ ಇವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಸಭೆಯಲ್ಲಿ ಸರ್ಕಾರದ ದೌರ್ಜನ್ಯ ನೀತಿಯನ್ನು ಖಂಡಿಸಿ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸರ್ಕಾರವೇ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವುದರ ಬದಲು ಹಿರಿಯ ಬಂಡವಾಳ ಶಾಹಿಯಾಗಿ ವರ್ತಿಸುವುದನ್ನು ಖಂಡಿಸಿದರು. ಈಗಲಾದರೂ ಸರ್ಕಾರದವರು ವಿವೇಕದಿಂದ ವರ್ತಿಸಿ ತನ್ನ ದೌರ್ಜನ್ಯ ನೀತಿಯನ್ನು ಬದಲಿಸಿ ಹಿಂದೂಸ್ಥಾನ ವಿಮಾನ ಕಾರ್ಮಿಕರ ಬೇಡಿಕೆಗಳನ್ನು ಬಗೆಹರಿಸಿ

([illegible] ಪುಟ ನೋಡಿ)

ಭಾರತ ಕಮ್ಯೂನಿಸ್ಟ್ ಪಕ್ಷದ ಹೊಸ ಕರಡು ಘಟನೆ

[ಭಾರತ ಕಮ್ಯೂನಿಸ್ಟ್ ಪಕ್ಷದ ಹೊಸ ಕರಡು ಘಟನೆಯ ಪೀಠಿಕೆಯನ್ನು ಮಾರ್ಚ್ 2ರ ಸಂಚಿಕೆಯಲ್ಲಿ ಪ್ರಕಟಿಸಿರುತ್ತೇವೆ. ಈ ಲೇಖನದಲ್ಲಿ ಪಾರ್ಟಿ ಸದಸ್ಯತನದ ನಿಯಮಗಳನ್ನು, ಅವರ ಹಕ್ಕು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದ ಅಂಶಗಳನ್ನು ನಿವೇದಿಸಲಾಗಿದೆ. ಅವುಗಳನ್ನು ಪಾರ್ಟಿ ಶಾಖೆಗಳಲ್ಲಿ ಚರ್ಚಿಸುವುದಲ್ಲದೆ ತಮ್ಮ ಅಭಿಪ್ರಾಯಗಳನ್ನು ಪ್ರಾಂತ ಸಮಿತಿಗೆ ಕಳಿಸುವುದು ಅಗತ್ಯ].

೧. ಹೆಸರು: ಪಕ್ಷದ ಹೆಸರು ಭಾರತ ಕಮ್ಯೂನಿಸ್ಟ್ ಪಕ್ಷವೆಂದಿರತಕ್ಕದ್ದು.

೨. ಚಿಹ್ನೆ: ಕೆಂಪು ಹಿನ್ನೆಲೆಯಲ್ಲಿ ಒಂದಕ್ಕೊಂದು ಅಡ್ಡವಾಗಿರುವ ಬಿಳಿ ಕುಡುಗೋಲು ಮತ್ತು ಸುತ್ತಿಗೆಗಳಿದ್ದು, ಇದರ ಸುತ್ತು "ಭಾರತ ಕಮ್ಯೂನಿಸ್ಟ್ ಪಕ್ಷ"ವೆಂದು ವೃತ್ತಾಕಾರವಾಗಿ ಬಿಳಿ ವರ್ಣದಲ್ಲಿ ಬರೆದಿರುವುದು ಪಕ್ಷದ ಚಿಹ್ನೆಯಾಗಿರತಕ್ಕದು.

೩. ಧ್ವಜ: ಪಕ್ಷದ ಧ್ವಜವು ಕೆಂಪು ಧ್ವಜವಾಗಿದ್ದು ಅದರ ಉದ್ದವು ಅಗಲದ ಒಂದೂವರೆ ಪಾಲಿನಷ್ಟಿರತಕ್ಕದು. ಧ್ವಜದ ಮಧ್ಯದಲ್ಲಿ ಒಂದರ ಮೇಲೊಂದು ಅಡ್ಡವಾಗಿರುವ ಒಂದು ಕುಡುಗೋಲು ಮತ್ತು ಸುತ್ತಿಗೆಯು ಬಿಳಿ ವರ್ಣದಲ್ಲಿರತಕ್ಕದು.

೪. ಪಾರ್ಟಿ ಸದಸ್ಯತ್ವ: 1. ಪಕ್ಷದ ಕಾರ್ಯಕ್ರಮ ಮತ್ತು ಘಟನೆಯನ್ನು ಅಂಗೀಕರಿಸುವ, ಪಕ್ಷದ ಯಾವುದಾದರೊಂದು ಸಂಘಟನೆಯಲ್ಲಿ ಕೆಲಸ ಮಾಡಲು, ಕ್ರಮಬದ್ಧವಾಗಿ ಪಕ್ಷದ ಸದಸ್ಯತ್ವದ ಶುಲ್ಕಗಳನ್ನು ಕೊಡಲು ಮತ್ತು ಪಕ್ಷದ ತೀರ್ಮಾನಗಳನ್ನು ಕಾರ್ಯಗತಗೊಳಿಸಲು ಒಪ್ಪುವ ಹದಿನೆಂಟು ವರ್ಷ ವಯಸ್ಸಿನ ಅಥವಾ ಅದರ ಮೇಲ್ಪಟ್ಟ ಯಾವ ಭಾರತದ ಪ್ರಜೆಗೂ ಪಕ್ಷದ ಸದಸ್ಯನಾಗಲು ಅರ್ಹತೆ ಇರತಕ್ಕದ್ದು.

2. ಇಬ್ಬರು ಪಕ್ಷದ ಸದಸ್ಯರಿಂದ ಶಿಫಾರಸ್ಸು ಮಾಡಲ್ಪಟ್ಟ ವೈಯಕ್ತಿಕ ಅರ್ಜಿಗಳ ಮೂಲಕ ಮತ್ತು ಒಂದು ಪಕ್ಷದ ಶಾಖೆಯ ಮೂಲಕ ಹೊಸ ಸದಸ್ಯರನ್ನು ಸೇರಿಸಲಾಗುವುದು. ಜಿಲ್ಲಾ, ಪ್ರಾಂತೀಯ ಮತ್ತು ಕೇಂದ್ರದ ಮಟ್ಟಗಳ ಸಮಿತಿಗಳಿಗೂ ಹೊಸ ಸದಸ್ಯರನ್ನು ಸೇರಿಸುವ ಅಧಿಕಾರವಿರುವುದು. ಅರ್ಜಿದಾರನನ್ನು ಶಿಫಾರಸ್ಸು ಮಾಡುವ ಪಕ್ಷದ ಸದಸ್ಯರು ತಮ್ಮ ವೈಯಕ್ತಿಕ ಪರಿಚಯದಿಂದಲೂ ಮತ್ತು ಯೋಗ್ಯ ಜವಾಬ್ದಾರಿಯುತ ಭಾವನೆಯಿಂದಲೂ ಅರ್ಜಿದಾರನ ಬಗ್ಗೆ ನಿಜವಾದ ವಿಷಯಗಳನ್ನು ಸಂಬಂಧಪಟ್ಟ ಪಕ್ಷದ ಶಾಖೆಗೆ ಅಥವಾ ಪಕ್ಷದ ಸಮಿತಿಗೆ ತಿಳಿಸತಕ್ಕದ್ದು.

3. ಪಕ್ಷದ ಶಾಖೆಯ ಸರ್ವಸದಸ್ಯರ ಸಭೆಯು ಪ್ರವೇಶದ ಪ್ರಶ್ನೆಯನ್ನು ತೀರ್ಮಾನಿಸುವುದು ಮತ್ತು ಅರ್ಜಿದಾರನನ್ನು ಪಕ್ಷಕ್ಕೆ ಸೇರಿಸಿಕೊಂಡರೆ ಅವನು ಅಥವಾ ಅವಳು ಆಯಾ ಪ್ರವೇಶ ದಿನದಿಂದ ಆರು ತಿಂಗಳು ಕಾಲ ಉಮೇದುವಾರ ಸದಸ್ಯನೆಂದು ಪರಿಗಣಿಸಲ್ಪಡತಕ್ಕದ್ದು.

4. ಸ್ಥಳೀಯ, ಜಿಲ್ಲಾ ಅಥವಾ ಪ್ರಾಂತ್ಯ ಮಟ್ಟದ ಯಾವುದೇ ಇತರ ರಾಜಕೀಯ ಪಕ್ಷದ ಪ್ರಮುಖ ಸದಸ್ಯನು ಪಕ್ಷಕ್ಕೆ ಸೇರಲಪೇಕ್ಷಿಸಿದರೆ ಅಂಥ ಅರ್ಜಿದಾರನನ್ನು ಪಕ್ಷಕ್ಕೆ ಸೇರಿಸುವ ಮೊದಲು ಅದರ ಮೇಲಿನ ಸಮಿತಿಯ ಅನುಮತಿಯನ್ನು ಪಡೆಯತಕ್ಕದ್ದು.

5. ಒಂದು ಸಲ ಪಕ್ಷದಿಂದ ಹೊರದೂಡಲ್ಪಟ್ಟ ಸದಸ್ಯರನ್ನು ಪುನಃ ಸೇರಿಸಿಕೊಳ್ಳಬೇಕಾದರೆ ಹೊರದೂಡುವಿಕೆಯನ್ನು ಕಾಯಂ ಮಾಡಿದ ಪಕ್ಷದ ಸಮಿತಿ ಅಥವಾ ಮೇಲಿನ ಸಮಿತಿಯು ತೀರ್ಮಾನಿಸಿದರೆ ಮಾತ್ರ ಸಾಧ್ಯ.

6. ಉಮೇದುವಾರ ಸದಸ್ಯರಿಗೆ ಪೂರ್ಣ ಸದಸ್ಯರಿಗಿರುವ ಕರ್ತವ್ಯ ಮತ್ತು ಹಕ್ಕುಗಳೆಲ್ಲ ಇರುತ್ತವೆ. ಆದರೆ ಆರಿಸುವ ಅಥವಾ ಆರಿಸಲ್ಪಡುವ ಅಥವಾ ಯಾವುದೇ ಸೂಚನೆಗೆ ಮತ ಕೊಡುವ ಹಕ್ಕು ಮಾತ್ರವಿರುವುದಿಲ್ಲ.

7. ಉಮೇದುವಾರ ಸದಸ್ಯರನ್ನು ಸೇರಿಸುವ ಪಕ್ಷದ ಶಾಖೆ ಅಥವಾ ಪಕ್ಷದ ಸಮಿತಿಯು ಪಕ್ಷದ ಕಾರ್ಯಕ್ರಮ, ಘಟನೆ ಮತ್ತು ಸದ್ಯದ ಧೋರಣೆಗಳ ಬಗ್ಗೆ ಸಾಮಾನ್ಯ ಶಿಕ್ಷಣ ಕೊಡುವ ವ್ಯವಸ್ಥೆ ಮಾಡತಕ್ಕದ್ದು ಮತ್ತು ಅವರ ಬೆಳವಣಿಗೆಯನ್ನು ಗಮನಿಸತಕ್ಕದ್ದು.

8. ಉಮೇದುವಾರಿಕೆಯ ಕಾಲಾಂತ್ಯದಲ್ಲಿ ಸಂಬಂಧಪಟ್ಟ ಪಕ್ಷದ ಸಮಿತಿಯು ಉಮೇದುವಾರ ಸದಸ್ಯನು ಪೂರ್ಣಸದಸ್ಯನಾಗುವ ಅರ್ಹತೆಯನ್ನು ಚರ್ಚಿಸತಕ್ಕದು. ಪಕ್ಷದಶಾಖೆ ಅಥವ ಸಮಿತಿಯು ಸಂಬಂಧಿಸಿದ ಉಮೇದುವಾರರನ್ನು ಪೂರ್ಣ ಸದಸ್ಯತನಕ್ಕೆ ಸೇರಿಸಬಹುದು ಅಥವಾ ಉಮೇದುವಾರಿಕೆಯ ಅವಧಿಯನ್ನು, ಇನ್ನಾರು ತಿಂಗಳಿಗಿಂತ ಹೆಚ್ಚಾಗಿರದೆ, ಮುಂದರಿಸಬಹುದು. ಉಮೇದುವಾರ ಸದಸ್ಯನು ಯೋಗ್ಯನಲ್ಲವೆಂದು ಕಂಡು ಬಂದರೆ ಪಕ್ಷದ ಶಾಖೆ ಅಥವಾ ಸಮಿತಿಯು ಅವನ/ಅವಳ ಉಮೇದುವಾರ ಸದಸ್ಯತ್ವವನ್ನು ರದ್ದುಗೊಳಿಸಬಹುದು. ಉಮೇದುವಾರರನ್ನು ಸೇರಿಸಿದ ಮತ್ತು ಪೂರ್ಣ ಸದಸ್ಯರನ್ನು ಮಾಡಿದ ಬಗ್ಗೆ ವರದಿಯನ್ನು ಶಾಖೆ ಅಥವಾ ಪಕ್ಷದ ಸಮಿತಿಯು ತನ್ನ ಮೇಲಿನ ಪಕ್ಷದ ಸಮಿತಿಗೆ ಕಾಲಕಾಲಕ್ಕೆ ಕಳಿಸತಕ್ಕದ್ದು.

9. ಮೇಲಿನ ಸಮಿತಿಯು ವರದಿಯನ್ನು ಪರಿಶೀಲಿಸಿ ಆ ತೀರ್ಮಾನವನ್ನು ಬದಲಾಯಿಸಬಹುದು. ಆದರೆ ಮೊದಲು ವರದಿಯನ್ನು ಕಳಿಸಿದ ಶಾಖೆ ಅಥವಾ ಪಕ್ಷದ ಸಮಿತಿಯೊಡನೆ ಸಮಾಲೋಚಿತಕ್ಕದು. ಉಮೇದುವಾರರನ್ನು ಸೇರಿಸುವುದರಲ್ಲೂ, ಪೂರ್ಣ ಸದಸ್ಯತ್ವ ಕೊಡುವುದರಲ್ಲೂ ಜಿಲ್ಲಾ ಮತ್ತು ಪ್ರಾಂತ ಸಮಿತಿಗಳಿಗೆ ಮೇಲ್ವಿಚಾರಣಾ ಹಕ್ಕನ್ನೂ ಚಲಾಯಿಸುವ ಅಧಿಕಾರವಿದೆ ಮತ್ತು ಕೆಳಸಮಿತಿಗಳ ತೀರ್ಮಾನಗಳನ್ನು ಬದಲಾಯಿಸುವ ಅಥವಾ ತಿರಸ್ಕರಿಸುವ ಅಧಿಕಾರವಿರುತ್ತದೆ.

10. ಪಕ್ಷದ ಸದಸ್ಯನು ಅವನ ಅಥವಾ ಅವಳ ಸದಸ್ಯತ್ವವನ್ನು ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ವರ್ಗಾಯಿಸಬಹುದು. ಆದರೆ ಅದಕ್ಕೆ ಯಾವ ಘಟಕದಿಂದ ಹೋಗುತ್ತಾನೋ ಅದರ ಒಪ್ಪಿಗೆ ಪಡೆಯಬೇಕು ಮತ್ತು ಅದೇ ಘಟಕದಿಂದ ಹೊಸದಾಗಿ ಸೇರಲಿರುವ ಘಟಕಕ್ಕೆ ಪರಿಚಯ ಪತ್ರ ಒಪ್ಪಿಸಬೇಕು. ಜಿಲ್ಲೆಯ ಅಥವಾ ಪ್ರಾಂತ್ಯದ ಹೊರಗೆ ವರ್ಗಾಯಿಸುವುದಾದರೆ, ಜಿಲ್ಲಾ ಅಥವಾ ಪ್ರಾಂತ ಸಮಿತಿಗಳ ಒಪ್ಪಿಗೆ ಪಡೆಯತಕ್ಕದ್ದು.

೫. ಪಕ್ಷದ ಪ್ರತಿಜ್ಞೆ: ಎಲ್ಲ ಉಮೇದುವಾರರೂ ಮತ್ತು ಪಕ್ಷದ ಪೂರ್ಣ ಸದಸ್ಯರೂ ಸಹ ಪಕ್ಷದ ಪ್ರತಿಜ್ಞೆಗೆ ಸಹಿ ಮಾಡತಕ್ಕದ್ದು: ಪ್ರತಿಜ್ಞೆಯು ಈ ರೀತಿ ಇರತಕ್ಕದ್ದು: "ನಾನು ಪಕ್ಷದ ಗುರಿ ಮತ್ತು ಧ್ಯೇಯಗಳನ್ನು ಅಂಗೀಕರಿಸುತ್ತೇನೆ ಮತ್ತು ಅದರ ಘಟನೆಯನ್ನನುಸರಿಸುವುದಕ್ಕೂ ಮತ್ತು ಪಕ್ಷದ ತೀರ್ಮಾನಗಳನ್ನು ನಿಷ್ಠೆಯಿಂದ ಕಾರ್ಯರೂಪಕ್ಕೆ ತರುವುದಕ್ಕೂ ಒಪ್ಪುತ್ತೇನೆ.

"ಕಮ್ಯೂನಿಸಂನ ಆದರ್ಶಧ್ಯೇಯಗಳಿಗನ್ವಯಿಸುವಂತೆ ಜೀವಿಸಲು ಪ್ರಯತ್ನಿಸುತ್ತೇನೆ ಮತ್ತು ವೈಯಕ್ತಿಕ ಹಿತಗಳಿಗಿಂತ ಪಕ್ಷದ ಮತ್ತು ಜನತೆಯ ಹಿತಗಳನ್ನೇ ಸದಾ ಮುಂದಿಟ್ಟು ಕೊಂಡು, ನಿಸ್ವಾರ್ಥತೆಯಿಂದ ಕಾರ್ಮಿಕ ವರ್ಗ ಮತ್ತು ಜನತೆಗೋಸ್ಕರ ದುಡಿಯುತ್ತೇನೆ".

೬. ಪಕ್ಷದ ಸದಸ್ಯತನದ ಕಾರ್ಡು:

1. ಪೂರ್ಣ ಸದಸ್ಯನಾಗಿ ಸೇರಿಸಿಕೊಂಡ ನಂತರ ಪ್ರತಿಯೊಬ್ಬ ಪಕ್ಷದ ಸದಸ್ಯನಿಗೂ ಪಕ್ಷದ ಸದಸ್ಯತನದ ಕಾರ್ಡನ್ನು ಕೊಡತಕ್ಕದ್ದು.

2. ಪಕ್ಷದ ಕಾರ್ಡುಗಳು ದೇಶಾದ್ಯಂತ ಒಂದೇ ರೀತಿಯದಾಗಿದ್ದು ಪ್ರಾಂತ ಸಮಿತಿಗಳಿಂದ ಕೊಡಲ್ಪಡತಕ್ಕದು. ಕಾರ್ಡುಗಳ ರೂಪ ಮತ್ತು ಒಳವಿಷಯಗಳನ್ನು ಕೇಂದ್ರ ಕಾರ್ಯಕಾರಿ ಸಮಿತಿಯು ನಿರ್ಧರಿಸುವುದು.

೭. ಸದಸ್ಯತ್ವದ ಕಾರ್ಡಿನ ಮುಂದುವರಿಸುವಿಕೆ: 1. ಪಕ್ಷದ ಸದಸ್ಯತನದ ಕಾರ್ಡುಗಳನ್ನು ವರ್ಷಕ್ಕೊಂದಾವರ್ತಿ ಮುಂದುವರಿಸತಕ್ಕದ್ದು. ಪಕ್ಷದ ಸದಸ್ಯನು ಸೇರಿರುವ ಪಕ್ಷದ ಸಂಘಟನೆಯ ವಿಮರ್ಶೆಯ ಆಧಾರದ ಮೇಲೆ ಮುಂದುವರಿಸುವಿಕೆ ನಡೆಯುವುದು. ಅಖಂಡವಾಗಿ ಆರು ತಿಂಗಳು ಮತ್ತು ಯೋಗ್ಯ ಕಾರಣವಿಲ್ಲದೆ ಪಾರ್ಟಿಯ ಜೀವನ ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸದೆ ಅಥವಾ ಪಕ್ಷದ ಸದಸ್ಯತನದ ಶುಲ್ಕಗಳನ್ನು ಕೊಡದಿರುವ ಪಕ್ಷದ ಸದಸ್ಯನಿಗೆ ಪಕ್ಷದ ಸದಸ್ಯತನದ ಕಾರ್ಡನ್ನು ಕೊಡಲಾಗದು.

2. ಪಕ್ಷದ ಕಾರ್ಡುಗಳ ಮುಂದುವರಿಕೆಯ ಬಗ್ಗೆ ವರದಿಯನ್ನು ಶಾಖೆ ಅಥವಾ ಪಕ್ಷದ ಸಮಿತಿಯು ತನ್ನ ಮೇಲಿನ ಸಮಿತಿಗೆ ಅದನ್ನು ಕಾಯಂಮಾಡಲು ಮತ್ತು ದಾಖಲೆ ಮಾಡಲು ಕಳಿಸತಕ್ಕದ್ದು.

೮. ಪಕ್ಷದ ಸದಸ್ಯತ್ವಕ್ಕೆ ರಾಜಿನಾಮೆ:

1. ಪಕ್ಷದ ಯಾವ ಸದಸ್ಯನಾಗಲಿ ಪಕ್ಷಕ್ಕೆ ರಾಜಿನಾಮೆ ಕೊಡಬಯಸಿದರೆ ಸಂಬಂಧಪಟ್ಟ ಪಕ್ಷದ ಶಾಖೆಗೆ ಅದನ್ನು ಕೊಡತಕ್ಕದ್ದು. ಶಾಖೆಯ ಸರ್ವಸದಸ್ಯರ ಸಭೆಯು ಅದನ್ನು ಅಂಗೀಕರಿಸುವ ತೀರ್ಮಾನ ಮಾಡಬಹುದು ಮತ್ತು ಅವನ ಅಥವಾ ಅವಳ ಹೆಸರನ್ನು ಹೊಡೆದುಹಾಕಿ ಮೇಲಿನ ಸಮಿತಿಗೆ ತಿಳಿಸತಕ್ಕದ್ದು.

2. ಪಕ್ಷದ ಶಾಖೆ ಅಥವಾ ಸಮಿತಿಯು, ಅವಶ್ಯ ಕಂಡಲ್ಲಿ, ರಾಜಿನಾಮೆ ಕೊಡಲಿಚ್ಛಿಸುವ ಸದಸ್ಯನ ತೀರ್ಮಾನವನ್ನು ಬದಲಾಯಿಸಲು ಪ್ರಯತ್ನಿಸಬಹುದು.

3. ರಾಜಿನಾಮೆ ಕೊಡ ಬಯಸುವ ಸದಸ್ಯನ ಮೇಲೆ ಶಿಸ್ತು ಭಂಗದ ಗಂಭೀರ ಆರೋಪಗಳಿದ್ದು ಪಕ್ಷದಿಂದ ಹೊರಹಾಕುವ ಸಂಭವವಿದ್ದರೆ ಅವನ ಅಥವಾ ಅವಳ ರಾಜಿನಾಮೆಯನ್ನು ಪಕ್ಷದಿಂದ ಹೊರಹಾಕಿದೆಂದು ಪರಿಗಣಿಸಿ ಕ್ರಮ ತೆಗೆದುಕೊಳ್ಳಬಹುದು.

4. ರಾಜಿನಾಮೆ ಕೊಟ್ಟವನನ್ನು ಹೊರಹಾಕಿದೆಂದು ತೀರ್ಮಾನಿಸಿದ ಬಗ್ಗೆ ಅದರ ವರದಿಯನ್ನು ಮೇಲಿನ ಸಮಿತಿಗೆ ಕೂಡಲೇ ತಿಳಿಸತಕ್ಕದ್ದು ಮತ್ತು ಅದರ ಒಪ್ಪಿಗೆ ಪಡೆಯತಕ್ಕದ್ದು.

ವಿಮಾನ ಕಾರ್ಖಾನೆ ನೌಕರರ ಹೋರಾಟ!

(೧ನೇ ಪುಟದಿಂದ)

ಮೆಂಟ್ ಸದಸ್ಯರಾದ ಪಾರ್ವತಿ ಕೃಷ್ಣನ್‌ರವರು ವಿಮಾನ ಕಾರ್ಖಾನೆ ನೌಕರರನ್ನು ದ್ದೇಶಿಸಿ ಮಾತನಾಡಿದರು ನೌಕರರು ಸಂಘಟನೆಯನ್ನು ಬಲಪಡಿಸಿಕೊಂಡು, ಐಕ್ಯತೆಯಿಂದ ತಮ್ಮ ಹೋರಾಟವನ್ನು ಮುಂದುವರಿಸಬೇಕೆಂದು ಕರೆಯಿತ್ತರು. ಈ ಸಭೆಯಲ್ಲಿ ಪಿ. ಎಸ್ ಪಿ. ಶಾಸನ ಸಭಾಸದಸ್ಯರೂ ಮಾತನಾಡಿ ನೌಕರರ ಹೋರಾಟಕ್ಕೆ ತಮ್ಮ ಬೆಂಬಲವನ್ನಿತ್ತಿದ್ದಾರೆ.

ಶ್ರೀಮತಿ ಪಾರ್ವತಿ ಕೃಷ್ಣನ್‌ರವರು ಪತ್ರಿಕೆಗಳಿಗೆ ಇತ್ತ ಹೇಳಿಕೆಯಲ್ಲಿ ಮ್ಯಾನೇಜ್‌ಮೆಂಟು ತಾನು ಕೊಟ್ಟ ವಾಗ್ದಾನದಿಂದ ಹಿಂದೆ ಹೋಗಿದೆಯೆಂದು ಆರೋಪಿಸಿದ್ದಾರೆ. ದೆಹಲಿಗೆ ಜನರಲ್ ಮ್ಯಾನೇಜರ್ ಶ್ರೀ ನಾಗೇಶ್‌ರವರು ತೆರಳಿದಾಗ ಪಾರ್ಲಿಮೆಂಟ್ ಸದಸ್ಯರುಗಳಿಗೂ ಸರಕಾರಕ್ಕೂ ಸೂಕ್ತವಾದ ಒಪ್ಪಂದಕ್ಕೆ ಬರುವುದಾಗಿ ಇತ್ತಿದ್ದ ವಾಗ್ದಾನವನ್ನು ಮುರಿದಿದ್ದಾರೆಂದೂ, ಪರಿಸ್ಥಿತಿಯು ಇದರಿಂದಾಗಿ ಕೆಟ್ಟಿದೆಯೆಂದೂ ತಿಳಿಸಿದ್ದಾರೆ.

ಸಂಘದ ಖಜಾಂಚಿಯಾದ ಶ್ರೀ ಜ್ವಾಲನಯ್ಯನವರು ಇತ್ತಿರುವ ಹೇಳಿಕೆಯಲ್ಲಿ, ಮ್ಯಾನೇಜ್‌ಮೆಂಟಿನ ಮೊಂಡುತನವನ್ನು ಖಂಡಿಸಿ, ನೌಕರರು ಐಕ್ಯತೆಯಿಂದ, ತಮ್ಮ ಹೋರಾಟವನ್ನು ಮುಂದುವರಿಸಿ, ಸಂಘದ ಸುತ್ತ ಅಣಿ ನೆರೆಯಬೇಕೆಂದು ವಿನಂತಿಸಿದ್ದಾರೆ.

ಹನ್ನೊಂದು ಸಾವಿರ ನೌಕರರ ಹಿತದೃಷ್ಟಿಯಿಂದ, ರಾಷ್ಟ್ರೀಯ ಉದ್ಯಮದ ಮುಖ್ಯವಾದ ಈ ಕೈಗಾರಿಕೆಯ ಅಭಿವೃದ್ಧಿಯಹಿತ ದೃಷ್ಟಿಯಿಂದ, ಸರಕಾರ ಕೂಡಲೇ ಸೂಕ್ತಕ್ರಮ ಕೈಗೊಂಡು ಪರಿಸ್ಥಿತಿಯನ್ನು ಸುಧಾರಿಸಲಿ ಎಂದು ಒತ್ತಾಯ ಪಡಿಸುತ್ತೇವೆ.

12-3-58

ಇನ್ನೋರ್ವ ಯುವತಿಯ ಮಾನಭಂಗ

ದಫೇದಾರನ ದಸ್ತಗಿರಿ

ಬೆಂಗಳೂರು ನಗರದ ನಾಗರಿಕರನ್ನು ಭಯವಿಹ್ವಲಗೊಳಿಸುವ, ರೊಚ್ಚಿಗೆಬ್ಬಿಸುವ ಇನ್ನೊಂದು ರಾಕ್ಷಸೀ ಕೃತ್ಯ ನಡೆದಿದೆ. ಪೋಲೀಸ್ ದಫೇದಾರನೊಬ್ಬನನ್ನು 20 ವರುಷದ ಯುವತಿಯೋರ್ವಳ ಮೇಲೆ ನಡೆಸಿದ ಅಮಾನುಷ ಬಲಾತ್ಕಾರಕ್ಕಾಗಿ ದಸ್ತಗಿರಿ ಮಾಡಲಾಗಿದೆ. ಪೋಲೀಸ್ ಅಧಿಕಾರಿಗಳು ದಸ್ತಗಿರಿ ವಿಷಯ ತಿಳಿಸಿದರೂ ಇದರ ವಿವರ ಕೊಡಲು ನಿರಾಕರಿಸಿದ್ದಾರೆ. ನಮಗೆ ತಿಳಿದು ಬಂದ ವಿವರ ಹೀಗಿದೆ:

ಈ ಘಟನೆ ನಡೆದುದು ಮಾಗಡಿ ರೋಡ್ ಪೋಲೀಸ್ ಸ್ಟೇಷನಿನಲ್ಲಿ ಎಂದು ಕೆಲವರನ್ನುತ್ತಿದ್ದಾರೆ. ಅಲಸೂರ್ ಗೇಟ್ ಪೋಲೀಸ್ ಸ್ಟೇಷನಿನಲ್ಲಿ ನಡೆದುದೆಂದು ಇನ್ನಿತರರೆನ್ನುತ್ತಿದ್ದಾರೆ.

ಒಂದರಹಿಂದೆ ಒಂದರಂತೆ ನಡೆಯುತ್ತಿರುವ ಪೋಲೀಸು ಅತ್ಯಾಚಾರಗಳನ್ನು ಕಂಡಾಗ ಈ ಎರಡು ಸ್ಟೇಷನುಗಳಲ್ಲೂ ನಾಗರಿಕರಿಗೆ ತಿಳಿಯದಂತೆ ಸ್ತ್ರೀಯರ ಶೀಲ ಭಂಗ ಆಗುತ್ತ ಇರಬಹುದು ಎಂದು ನಾವು ಭಾವಿಸಿದರೆ ಅದು ಅಸಹಜವಾಗದು.

ಅಂತೂ ಇಷ್ಟು ನಿಜ, ಪೋಲೀಸ್ ಕಾನ್‌ಸ್ಟೇಬಲ್‌ನ ಮಗಳು ತನ್ನ ತಂದೆಯು ಮೂರುನಾಲ್ಕು ದಿನಗಳಿಂದ ಮನೆಗೆ ಬರದ ಕಾರಣ, ಆತನನ್ನು ಕಾಣಲು ತೆರಳಿದ್ದಳಂತೆ. ಪೋಲೀಸ್ ಸ್ಟೇಷನಿನಲ್ಲಿ ವಿಚಾರಿಸಲಾಗಿ, ದಫೇದಾರನ ತಂದೆಯನ್ನು ತೋರಿಸುವುದಾಗಿ, ಆ ಯುವತಿಯನ್ನು ಕರೆದುಕೊಂಡು ಹೋಗಿ ಬಲಾತ್ಕಾರಿಸಿದ್ದಾನೆಂದು ತಿಳಿದು ಬಂದಿದೆ. ಜನರು ಇದನ್ನು ಕೇಳಿ ತೀವ್ರವಾಗಿ ಕೆರಳಿದ್ದಾರೆಂದು ತಿಳಿಯಲಾಗಿದೆ

ಈ ಘಟನೆ ನಡೆದ ಕೂಡಲೇ ದಫೇದಾರನು ಮೂರು ದಿವಸಗಳ ರಜೆ ತೆಗೆದುಕೊಂಡು ಊರು ಬಿಟ್ಟು ಓಡಿ ಹೋಗುವ ಹವಣಿಕೆಯಲ್ಲಿ ಇದ್ದನೆಂದೂ, ಡಿ. ಎಸ್. ಪಿ.ಗೆ ಈ ಬಗ್ಗೆ ತಿಳಿಸಿದ ಪರಿಣಾಮವಾಗಿ ಆತನ ದಸ್ತಗಿರಿಯಾಯಿತೆಂದೂ ತಿಳಿಯಲಾಗಿದೆ.

ಪೋಲೀಸ್ ಅಧಿಕಾರಿಗಳು ಪತ್ರಿಕಾಕರಿಗೆ ಈ ಬಗ್ಗೆ ವಿವರವೀಯಲು ನಿರಾಕರಿಸುತ್ತಿದ್ದಾರೆ. ಮುನಿಯಮ್ಮನ ಹತ್ಯಾಕಾಂಡದಲ್ಲಿ ಭಾಗವಹಿಸಿದ್ದ ಪೋಲೀಸ್ ರಾಕ್ಷಸರನ್ನು ರಕ್ಷಿಸಲು ಸುಳ್ಳು ಹೇಳಿಕೆಯಿತ್ತ ಅಧಿಕಾರಿಗಳೇ ಈ ವಿಷಯದಲ್ಲಿಯೂ ಮೌನವಾಗಿರುವ ಯೋಜನೆಯನ್ನು ಹೂಡಿರಬಹುದೆ? ಆದರೆ ನಗರದ ನಾಗರಿಕರು ದಿನ ಬಿಡದೆ ದಿನ ನಡೆಯುತ್ತಿರುವ ಪೋಲೀಸ್ ಅತ್ಯಾಚಾರಗಳನ್ನು ಕಂಡು ಸುಮ್ಮಗಿರಲು ಸಾಧ್ಯವಿಲ್ಲ. ಪೋಲೀಸ್ ಜಾತಿಯಲ್ಲಿ ಈ ಪೋಲೀಸ್ ಕಾನ್‌ಸ್ಟೇಬಲುಗಳು, ದಫೇದಾರರ ಈ ಭೀಬತ್ಸ ಪ್ರವೃತ್ತಿಯನ್ನು ಪ್ರಕಟಿಸುವುದಾದರೆ, ಇವರ ಮೇಲೆ ಅಧಿಕಾರಿಗಳ ಸೂಕ್ತ ಹದ್ದುಬಸ್ತಿಲ್ಲದಿರುವುದು ಗೋಚರವಾಗುತ್ತದೆ. ಅಥವಾ ಈ ಅಧಿಕಾರಿಗಳೇ ಇಂಥ ಅನ್ಯಾಯಗಳನ್ನು ತಾವು ಖುದ್ದಾಗಿ ನಡೆಸಿ ಪೋಲೀಸರಿಗೆ ಮೇಲ್ಪಂಕ್ತಿ ಹಾಕಿ ಕೊಟ್ಟಿರಬಹುದೇ? ಇಲ್ಲವಾದಲ್ಲಿ ಮೇಲಾಧಿಕಾರಿಗಳ ಭಯವಿಲ್ಲದೆ ಇಂಥಾ ಬಂಡಾಚಾರಗಳು ನಡೆಯುತ್ತಿರಲಿಲ್ಲ.

ಇದರಿಂದಾಗಿ ಸಾರ್ವಜನಿಕ ಸಾಮಾಜಿಕ ಭದ್ರತೆಗೆ ಪ್ರಬಲವಾದ ಏಟು ಬಿದ್ದಿದೆ. ನಮ್ಮ ಅಕ್ಕ-ತಂಗಿಯರ ಶೀಲಭಂಗ ನಡೆಯುತ್ತಿರುವುದನ್ನು ಕಂಡು ನಾಗರಿಕರು ಮೌನವಾಗಿರುವುದು ಇನ್ನು ಅಸಾಧ್ಯ. ಈ ಕೂಡಲೇ ಸಾರ್ವಜನಿಕವಾಗಿ ಬಹಿರಂಗ ವಿಚಾರಣೆಯಾಗಬೇಕು, ತಪ್ಪಿತಸ್ಥರಾದ ಅಧಿಕಾರಿಗಳೂ, ಪೋಲೀಸರೂ ಶಿಕ್ಷಿಸಲ್ಪಡಬೇಕು.

ಪೋಲೀಸ್ ಮಂತ್ರಿ ಪೂಣಚ್ಚರಲ್ಲೂ ಒಂದು ವಿನಂತಿ; ಕೊಡಗಿನಲ್ಲಿ ಇತ್ತೀಚೆಗೆ ನರ್ಸ್ ಒಬ್ಬಳ ಮೇಲೆ ನಡೆಸಿದ ಅತ್ಯಾಚಾರದ ಫಲವಾಗಿ ಸಬ್ ಇನ್‌ಸ್ಪೆಕ್ಟರನನ್ನು ಜನರು ಚೆನ್ನಾಗಿ ಥಳಿಸಿದ್ದುದನ್ನು ಗಮನಕ್ಕೆ ತಂದು, ರಾಜಧಾನಿಯಲ್ಲೂ ಇಂಥಾ ಘಟನೆಗಳಿಗೆ ಆಸ್ಪದ ಕೊಡಬಾರದೆಂದು ನಮ್ಮ ಮನವಿ.

ಉತ್ತರ ಕರ್ನಾಟಕದ ರೈತ ಸಂಘಟನೆಗಳ ಕಾರ್ಯಕರ್ತರ ಸಂಯುಕ್ತ ಸಭೆ

ಉತ್ತರ ಕರ್ನಾಟಕದಲ್ಲಿ ರೈತರನ್ನು ಸಂಘಟಿಸಿ ಹಲವಾರು ಸಂಘಟನೆಗಳು ಇಷ್ಟರವರೆಗೆ ದುಡಿಯುತ್ತಾ ಬಂದಿವೆ. ಕಿಸಾನ ಸಭೆ, ರೈತ ಕೂಟ ಮತ್ತಿತರ ರೈತ ಸಂಘಟನೆಗಳು ರೈತರ ಹಿತರಕ್ಷಣೆಗಾಗಿ ಹೋರಾಡುತ್ತಾ ಬಂದಿವೆ. ಆದರೆ ಈ ಸಂಘಟನೆಗಳು ಇಷ್ಟರವರೆಗೆ ಪ್ರತ್ಯೇಕವಾಗಿ, ಒಂದು ಇನ್ನೊಂದರೊಡನೆ ಸಂಪರ್ಕವಿಲ್ಲದೆ ದುಡಿಯುತ್ತಿದ್ದುವು. ರೈತರ ಹಿತರಕ್ಷಣೆಗಾಗಿರುವ ಸಂಘಟನೆಗಳ ಧ್ಯೇಯ, ಗುರಿಗಳು ಒಂದೇ ಇದ್ದು ಕಾರ್ಯರಂಗದಲ್ಲಿ ಐಕಮತ್ಯದಿಂದ ಹಿಂದೆ ದುಡಿದಿಲ್ಲ ಇನ್ನು ಮುಂದಾದರೂ ತಾವು ಪರಸ್ಪರ ಒಗ್ಗಟ್ಟಿನಿಂದ ದುಡಿಯಬೇಕೆಂದು ಈ ಸಂಘಟನೆಗಳ ಕಾರ್ಯಕರ್ತರು ಮನಗಂಡು ಕಳೆದ ತಾ. 2—3—58ರಲ್ಲಿ ಸಭೆ ಸೇರಿದ್ದರು. ಅಂಕೋಲೆಯ ಶ್ರೀ ನಾಡಕರ್ಣಿಯವರ ಗೃಹದಲ್ಲಿ ಸೇರಿದ ಸಭೆಯ ಅಧ್ಯಕ್ಷತೆಯನ್ನು ಶ್ರೀ ದೀಪಣ್ಣ ಮಂಜಣ್ಣ ಶೆಟ್ಟಿಯವರು ವಹಿಸಿದ್ದರು.

ಜಿಲ್ಲೆಯ ರೈತರವೆಲ್ಲಾ ಸಮಸ್ಯೆಗಳು ಒಂದೇ ಆಗಿರುವ ಕಾರಣ ಇವರನ್ನು ಪ್ರತಿನಿಧಿಸುವ ಹಲವಾರು ಸಂಘಟನೆಗಳು ಇಂದು ಒಕ್ಕಟ್ಟಾಗಿ ಏಕಮುಖವಾಗಿ ಏಕಸೂತ್ರತೆಯಿಂದ ರೈತರ ಬೇಡಿಕೆಗಳನ್ನು ಮುಂದಿಡಬೇಕು. ಈ ಬೇಡಿಕೆಗಳ ಪೂರೈಕೆಗಾಗಿ ಸಂಯುಕ್ತ ಹೋರಾಟ ನಡೆಸಬೇಕೆಂದು ಸಭೆ ತೀರ್ಮಾನಿಸಿತು.

ತಾ. 14, 15ರಂದು ಕಾರವಾರದಲ್ಲಿ ನಡೆದ ಕಿಸಾನ್ ಪರಿಷತ್ತಿನಲ್ಲಿ ಸ್ವೀಕೃತವಾದ : ಭೂಸುಧಾರಣಾ ಕಾಯಿದೆಯಲ್ಲಿ ತಿದ್ದುಪಡಿಗಳು, ಮಾಫಿ ಶಿಕ್ಷಣ ಸೌಕರ್ಯ ಇತ್ಯಾದಿ ನಿರ್ಣಯಗಳನ್ನು ಈ ಸಭೆಯು ಒಪ್ಪುತ್ತದೆಂದೂ, ವಿಮಾನುಗಾರಿಕೆ ಮತ್ತು ಬೇಸಾಯ ಕೂಲಿಗಾರರಿಗೆ ಅತ್ಯಗತ್ಯವಾದ ನ್ಯಾಯವಾದ ಬೇಡಿಕೆಗಳನ್ನು ಪೂರೈಸಲು ಸರಕಾರ ವಿಳಂಬಮಾಡಬಾರದು ಎಂದು ಸಭೆಯು ತೀರ್ಮಾನಿಸಿತು.

ಅಜಯ ಘೋಷ್ ಪ್ರಾಗಿಗೆ

ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾದ ಅಜಯಕುಮಾರ್ ಘೋಷ್‌ರವರು ಮಾರ್ಚಿ 4ರಂದು ಪ್ರಾಗಿಗೆ ತೆರಳಿದ್ದಾರೆ.

ನವೆಂಬರಿನಲ್ಲಿ ನಡೆದ ಒಕ್ಟೋಬರ್ ಮಹಾಕ್ರಾಂತಿಯ 40ನೇ ವಾರ್ಷಿಕೋತ್ಸವದಂದು ಮೋಸ್ಕೋದಲ್ಲಿ ಕೂಡಿದ ಕಮ್ಯೂನಿಸ್ಟ್ ಪಕ್ಷಗಳ ಪ್ರತಿನಿಧಿಗಳು, ಅಂತರ್ರಾಷ್ಟ್ರೀಯ ಪತ್ರಿಕೆಯೊಂದರ ಆವಶ್ಯಕತೆಯ ಬಗ್ಗೆ ಚರ್ಚಿಸಿದ್ದರು. ಇಂಥ ಒಂದು ಪತ್ರಿಕೆಯಿಂದಾಗಿ ಸಹೋದರ ಕಮ್ಯೂನಿಸ್ಟ್ ಪಾರ್ಟಿಗಳೊಳಗೆ ಪರಸ್ಪರ ಅಭಿಪ್ರಾಯ ವಿನಿಮಯ, ಮಾರ್ಕ್ಸಿಸಂನ ಪ್ರಚಾರ ಮತ್ತು ಬೆಳವಣಿಗೆಗಾಗಿ ಈ ಪತ್ರಿಕೆ ಅತ್ಯಾವಶ್ಯಕ ಎಂಬ ಅಭಿಪ್ರಾಯ ತಳೆಯಲಾಗಿತ್ತು. ಆಗ ನಡೆದ ಮಾತುಕತೆಗಳು ಅಪೂರ್ಣವಾಗಿದ್ದು, ಇದೀಗ ಮಾರ್ಚಿ 7 ಮತ್ತು 8ರಲ್ಲಿ ನಡೆದ ಕಮ್ಯೂನಿಸ್ಟ್ ಪಕ್ಷಗಳ ಪ್ರತಿನಿಧಿಗಳ ಸಭೆಯಲ್ಲಿ ಈ ಬಗ್ಗೆ ನಿರ್ದಿಷ್ಟ ನಿರ್ಣಯವನ್ನು ತಳೆಯುವರೆಂದು ನಂಬಲಾಗಿದೆ.

ಕಾ| ಅಜಯ್ ಘೋಷ್‌ರವರು ಈ ಚರ್ಚೆಯಲ್ಲಿ ಭಾಗವಹಿಸಲು ಭಾರತ ಕಮ್ಯೂನಿಸ್ಟ್ ಪಕ್ಷದ ಪರವಾಗಿ ಪ್ರಾಗಿಗೆ ತೆರಳಿರುವರು.

—o—

ಮಾನವ ನಿರ್ಮಿತ ಹೃದಯ, ಶ್ವಾಸಕೋಶ, ಮೂತ್ರಪಿಂಡ!

ಕೃತಕ ಹೃದಯದ ಮತ್ತು ಶ್ವಾಸಕೋಶದ ಹೊಸ ನಮೂನೆಯನ್ನು ಸೋವಿಯೆತ್ ವಿಶೇಷಜ್ಞರು ತಯಾರಿಸ ತೊಡಗಿದ್ದಾರೆ. ಕಳೆದ ವರ್ಷಾಂತ್ಯಗಳಲ್ಲಿ ಪ್ರೊಫೆಸರ್ ಅಲೆಕ್ಸಾಂಡರ್ ವಿಷ್ನೆವ್‌ಸ್ಕಿಯವರು ಹೃದಯ ಸಂಬಂಧಿತ ವ್ಯಾಧಿಗಳ ಶಸ್ತ್ರ ಚಿಕಿತ್ಸೆಗಾಗಿ, ಕೃತಕ ಹೃದಯವನ್ನೂ, ಶ್ವಾಸಕೋಶವನ್ನೂ ಈಗಾಗಲೇ ಬಳಸಿ ಯಶಸ್ವಿಯಾಗಿದ್ದರು.

ವಿಶೇಷಜ್ಞರು ಈಗ ಕೃತಕ ಮೂತ್ರಪಿಂಡವನ್ನೂ,—ಮೂತ್ರ ಮತ್ತು ಪಿತ್ತನಾಳಗಳಲ್ಲಿನ 'ಶಿಲಾ'-ವಿಚ್ಛಿನ್ನ ಕ್ರಿಯೆಯಸಲುವಾಗಿ ತಯಾರಿಸಲಾಗಿರುವ ಉಪಕರಣವನ್ನೂ ಒಳಗೊಂಡು,-ತಯಾರಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

೧೯೫೮ರಲ್ಲಿ ಈ ವಿದ್ಯಾಲಯವು ೬೦ ವಿವಿಧ ಉಪಕರಣಗಳ ತಯಾರಿಕೆಯನ್ನು ಕೈಗೊಳ್ಳಬೇಕೆಂದು ಯೋಚಿಸಿದೆ.

ಕೊಲೆ ಆರೋಪ ಹೊರಿಸಿ ಕಮ್ಯೂನಿಸ್ಟ್ ಕಾರ್ಯಕರ್ತರ ಬಂಧನ

ಬಾಗೇಪಲ್ಲಿ ತಾಲ್ಲೂಕು ಚೇಳೂರು ಹೋಬಳಿ ಮಿಂಡ್ಯಂಪಲ್ಲಿ ಗ್ರಾಮದಲ್ಲಿ ತಾ. 23-2-58ನೇ ತಾರೀಖು ರಾತ್ರಿ ಎಲಿಟಂ ರಾಮು ಎಂಬುವನನ್ನು ಕೊಲೆಮಾಡಿದರೆಂಬ ಆರೋಪಹೊರಿಸಿ, ಬಾಗೆಪಲ್ಲಿ ತಾಲ್ಲೂಕು ಕಮ್ಯೂನಿಸ್ಟ್ ಪಾರ್ಟಿ ಪ್ರಮುಖ ಕಾರ್ಯಕರ್ತರುಗಳಾದ ಕಾಂ॥ ಕೆ. ವೆಂಕಟರೆಡ್ಡಿ, ಕಾಂ| ಕೆ ಬಿ. ಬಯ್ಯಾರೆಡ್ಡಿ, ಕಾಂ| ನರಸಿಂಹಯ್ಯ ಮುಂತಾದ 29 ಮಂದಿಯ ಮೇಲೆ, ಚಿಕ್ಕಬಳ್ಳಾಪುರದ ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟ್ ಕೋರ್ಟಿನಲ್ಲಿ, ಬಾಗೇಪಲ್ಲಿ ಪೋಲೀಸರು ಛಾರ್ಜ್ ಶೀಟ್ ದಾಖಲು ಮಾಡಿರುತ್ತಾರೆ. ಇವರುಗಳನ್ನು ಜಾಮೀನಿನ ಮೇಲೆ ಬಿಡಲು ನಿರಾಕರಿಸಿರುತ್ತಾರೆಂದು ತಿಳಿದು ಬಂದಿದೆ.

ಮನೆ ಮುರಿದ ಮಗ

(ಸಾಮಾಜಿಕ ನಾಟಕ)

ಮೂಲ: ಶ್ರೀ ತೋಪಿಲ್ ಭಾಸಿ. ಅನುವಾದ: ಪಂಡಿತ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೃಶ್ಯ ೩

(ತನಿಯನ ಗುಡಿಸಲಿನ ಮುಂಭಾಗ. ತೆರೆ ಎದ್ದಾಗ ರಂಗಸ್ಥಳದಲ್ಲಿ ಯಾರೂ ಇಲ್ಲ. ಸ್ವಲ್ಪ ಹೊತ್ತು ಕಳೆದು ತನಿಯ ಪ್ರವೇಶಿಸುತ್ತಾನೆ.)

ತನಿಯ: ಬೊಳ್ಳೀ—

ಬೊಳ್ಳಿ: (ಒಳಗಿಂದ) ಓ—

ತನಿಯ: ಬಾರೇ ಇಲ್ಲೀ

ಬೊಳ್ಳಿ: (ಒಳಗಿಂದ) ಬಂದೇ— (ಹೊರಗೆ ಬರುತ್ತಾಳೆ.)

(ಬೊಳ್ಳಿ ಹೊರಗೆ ಬಂದೊಡನೆ ತನಿಯ, ಕೈಯಲ್ಲಿದ್ದ ಒಂದು ಚಿಕ್ಕ ಬಾಳೆ ಎಲೆಯ ಕಟ್ಟು ಬಿಚ್ಚಿ ಅದರಿಂದ ಒಂದು ಚಿಟಿಕೆ ವಿಭೂತಿ ತೆಗೆದು ಬೊಳ್ಳಿಯ ತಲೆಗೆ ಮೂರುಸಲ ಸುತ್ತಿ ಗಾಳಿಗೆ ತೂರುತ್ತಾನೆ. ಮತ್ತೊಂದು ಚಿಟಿಕೆ ತೆಗೆದು ಅವಳ ಹಣೆಗೆ ಹಚ್ಚುತ್ತಾನೆ. ಮತ್ತೊಂದು ಚಿಟಿಕೆ ತೆಗೆದು—)

ತನಿಯ: ಬಾಯಿ ಬಿಡು!

ಬೊಳ್ಳಿ: ಇದೇನಪ್ಪ ಇದು?

ತನಿಯ: ಬಾಯಿ ಬಿಡೂಂತೆ!

(ಬೊಳ್ಳಿ ಬಾಯಿ ತೆರೆಯುತ್ತಾಳೆ. ತನಿಯ ಚಿಟಿಕೆ ವಿಭೂತಿ ಅವಳ ಬಾಯಿಗೆ ಹಾಕುತ್ತಾನೆ.)

ತನಿಯ: ಅದನ್ನ ನುಂಕೊ!

(ಬೊಳ್ಳಿ ವಿಭೂತಿ ನುಂಗಿ ದಂಗು ಬಡೆದವಳಂತೆ ತನಿಯನ ಮುಖವನ್ನೆ ನೋಡುತ್ತಾಳೆ.)

ತನಿಯ: ಈಗ ನಿನ್ನ ಮನಸ್ನಾಗ ಏನೈತಿ?

ಬೊಳ್ಳಿ: (ಏನೂ ತಿಳಿಯದೆ) ಏನೂ ಇಲ್ಲ!

ತನಿಯ: ನಿಜಾ ಹೇಳು! ಸಾತ್ರೀ ಇಚಾರ ಏನೈತೀಂತ ಕೇಳಿದ್ದು!

ಬೊಳ್ಳಿ! (ಸಿಡುಕಿನಿಂದ) ಸಾತ್ರೀ ಇಚಾರ ನಂಗೇನ್ಗೊತ್ತಿ!

ತನಿಯ: (ಆಶ್ಚರ್ಯದಿಂದ) ಹೇಂ.! ಪೂಜಾರಪ್ಪನ ಇಭೂತಿ ಕಣೇ ಇದು!

ಬೊಳ್ಳಿ: (ತಾತ್ಸಾರದಿಂದ) ಪೂಜಾರಪ್ಪನ ಇಭೂತಿ! ನಾ ಒಲ್ಲೇಂದ್ರೆ ಒಲ್ಲೆ!

ತನಿಯ: ಏನೇ ಅದು? ಸಾತ್ರೀ ಯಾರೆಂದ್ಕೊಂಡಿದ್ದಿ? ಅಯ್ನೋರ್ರ ದೋಸ್ತಿ ಕಣೇ!

ಬೊಳ್ಳಿ: ಏನಾದ್ರೂ ಆಕ್ಕೊಂಡೋಗ್ಲಿ! ನಂಗೇನು?

ತನಿಯ: ಅಯ್ನೋರ್ರ ಪತ್ರ ಕುರ್ಚೀ ಮೇಕೆ ಕುಂತ್ಕೊಂಡು ಮಾತಾಡೋ ದೊಡ್ ಮನ್‌ಸ ಕಣೇ—ಸಾತ್ರಿ!

ಬೊಳ್ಳಿ: ಅಂಥ ದೊಡ್ ಮನ್ಸ ನಂಗ್ಬೇಡ!

ತನಿಯ: (ಸಿಟ್ಟಿನಿಂದ) ಒಲ್ಲೆ—ಒಲ್ಲೆ! ಒಂದೇ ರಾಗ ಅಗ್ಬುಡ್ತಲ್ಲ ನಿಂದು! ತಲೆ ಸುದ್ದ ಇದ್ಕೊ ಇಲ್ಲೋ ನಿಂಗೆ?

ಬೊಳ್ಳಿ: ಏನ್ಬೇಕಾದ್ರೂ ಅಂದ್ಕೊ—ನಾ ಸಾತ್ರೀನ ಒಲ್ಲೆ!

(ಬೊಳ್ಳಿ ಸಿಡುಕಿನಿಂದ ಒಳಗೆ ಹೋಗುತ್ತಾಳೆ. ತನಿಯ, ಮೂಲೆಯಲ್ಲಿದ್ದ ಎಲೆ ಅಡಿಕೆ ತಾಟು ತೆಗೆದು ಮುಂದಿಟ್ಟುಕೊಂಡು ಕುಳಿತುಕೊಳ್ಳುತ್ತಾನೆ. ಸ್ವಲ್ಪ ಹೊತ್ತು ಸದ್ದಿಲ್ಲ. ಒಂದೆರಡು ನಿಮಿಷ ಕಳೆದಾಗ ಸೋಮಪ್ಪ ಮತ್ತು ತಮಟೆಗಾರ ಪ್ರವೇಶಿಸುತ್ತಾರೆ.)

ಸೋಮಪ್ಪ: ಏನ್ ತನಿಯಣ್ಣ? ಮೊಕ ತಗ್ಸಿ ಕುಂತ್ಬಿಟ್ಟಿದ್ದೀಯಲ್ಲ?

ತನಿಯ: ಏನೋ ನನ್ ಕರ್ಮ!

ತಮಟೆಗಾರ: ತನಿಯಣ್ಣನಿಗೆ ಕೋಪ ಬಂದಂಗಿದೆಯಲ್ಲಾ?

ತನಿಯ: ಎಲ್ಲಾ ಸೇರಿ ನನ್ ಮಗ್ಳ ತಲೆ ಕೆಡ್ಸಿ ಬಿಟ್ಟಿದಾರೆ!

ಸೋಮಪ್ಪ: ಹಂಗೆಲ್ಲಾ ಕೆಟ್ಟು ಹೋಗ್ಲಿಕ್ಕೆ ಅದೇನು ಉಪ್ಪಿನ್ ಕಾಯೇನಿ?

ತನಿಯ: ನನ್ ಮಗ್ಳು ದೊಡ್ ಮನ್ಸನ ಜೊತೆ ಹೋಗ್ತಾಳೆಂದ್ರೆ ನನ್ ಸುಕ್ಕಿಗಿಲ್ಲ ಹೊಟ್ಟೆ ಕಿಚ್ಚು!

ತಮಟೆಗಾರ: ಯಾರಪ್ಪಾ ಆ ದೊಡ್ ಮನ್ಸ?

ಸೋಮಪ್ಪ: ಹಾಂ! ಈಗ ಗೊತ್ತಾಯ್ತು! ಬೊಳ್ಳೀನ ಶಾಸ್ತ್ರೀಗೆ ಗಂಟ್ ಹಾಕೋ ಯೋಚ್ನೆ! ಅಲ್ವೆ?

(ಶಾಸ್ತ್ರಿ ಪ್ರವೇಶಿಸುತ್ತಾನೆ. ಎಲ್ಲರೂ ಮಾತು ತಡೆದು ಶಾಸ್ತ್ರಿಯನ್ನೆ ಕುತೂಹಲದಿಂದ ನೋಡುತ್ತಾರೆ. ಸೋಮಪ್ಪನ ಮುಖದಲ್ಲಿ ಪರಿಹಾಸ್ಯ ಭಾವ ಕಾಣುತ್ತದೆ.)

ಶಾಸ್ತ್ರಿ: (ಪ್ರವೇಶಿಸುತ್ತಾ) ನಮಸ್ಕಾರ! ಎಲ್ಲರಿಗೂ ನಮಸ್ಕಾರ!

ಸೋಮಪ್ಪ: ಓಹೋ—ಹೋ! ಶಾಸ್ತ್ರಿಗಳೇ? ಬನ್ನಿ, ಬನ್ನಿ! ನಿಮ್ ಸುದ್ದೀನೇ ಈಗ ಮಾತಾಡ್ತಿದ್ವಿ!

(ತನಿಯ ಪೆಚ್ಚು ಮೋರೆಯಿಂದ ಶಾಸ್ತ್ರಿಯನ್ನು ನೋಡುತ್ತಾನೆ.)

ತನಿಯ: ಬೊಳ್ಳಿ—ನೀರ್ ತಂದ್‌ಕೊಡೇ—ಕೈಕಾಲ್ ತೊಳ್ಕೋಕೆ!

(ಶಾಸ್ತ್ರಿ ಕೊಡೆಯನ್ನು ಒಂದು ಬದಿಯಲ್ಲಿ ಇಡುತ್ತಾನೆ. ಬೊಳ್ಳಿ ಒಂದು ಮಣ್ಣಿನ ಬಿಂದಿಗೆಯಲ್ಲಿ ನೀರು ತೆಗೆದುಕೊಂಡು ಬರುತ್ತಾಳೆ. ಶಾಸ್ತ್ರಿ ಬಿಂದಿಗೆ ತೆಗೆದುಕೊಳ್ಳಲು ಕೈ ಚಾಚುತ್ತಾನೆ. ಬೊಳ್ಳಿ ಯಾರನ್ನೂ ನೋಡದೆ, ಯಾವುದನ್ನು ಗಮನಿಸದೆ, ಬಿಂದಿಗೆ ಹೊರಗೆ ಇಟ್ಟು ತಿರುಗಿ ಒಳಗೆ ಹೋಗುತ್ತಾಳೆ. ಶಾಸ್ತ್ರಿ ಪೆಚ್ಚಾಗುತ್ತಾನೆ. ಬೊಳ್ಳಿ ಹೋಗುವುದನ್ನೇ ನೋಡಿ ನಿಂತಿದ್ದು, ಅವಳು ಮರೆಯಾದ ಮೇಲೆ ಬಿಂದಿಗೆ ಎತ್ತಿಕೊಳ್ಳುತ್ತ—)

ಶಾಸ್ತ್ರಿ: ನಾಚಿಕೇಂತಂದ್ರೆ ಹುಡ್ಗಿಯರಿಗೆ ಚಂದ! (ಬಿಂದಿಗೆಯೊಡನೆ ಹೊರಗೆ ಹೋಗಿ ಒಂದು ನಿಮಿಷದಲ್ಲಿ ಹಿಂತಿರುಗುತ್ತಾನೆ. ಬಿಂದಿಗೆ ಕೆಳಗಿಟ್ಟು ಕುಳಿತುಕೊಳ್ಳುತ್ತಾನೆ. ತನಿಯ, ಸೋಮಪ್ಪ, ತಮಟೆಗಾರ ಎಲ್ಲರೂ ಕುಳಿತುಕೊಂಡಿದ್ದಾರೆ.

ಸೋಮಪ್ಪ: (ಶಾಸ್ತ್ರಿಯೊಡನೆ) ಎಲ್ಲಿಂದ ಬಂದ್ರಿ? ಏನ್ ಸಮಾಚಾರ?

ಶಾಸ್ತ್ರಿ: ಇಲ್ಲೊಂದು ಸಭೆ ನಡಸ್ಬೇಕೂಂತಿದೀವಿ. ಅದಕ್ಕೆ ಏರ್ಪಾಡೆಲ್ಲ ಮಾಡ್ಕೊಂಡು ಹೋಗಾನಾಂತ ಬಂದೆ.

ತಮಟೆಗಾರ: ಸಭೇ ಸುದ್ದಿ ನಾನೂ ಕೇಳಿದ್ದೆ!

ಸೋಮಪ್ಪ: ಎಂಥಾ ಸಭೇ? ಯಾಕೆ ನಡ್ಸೋದೂ? ನಮ್‌ಗೂ ಸ್ವಲ್ಪ ಹೇಳಿ ಶಾಸ್ತ್ರಿಗಳೇ!

ಶಾಸ್ತ್ರಿ: ನಿಮ್‌ಗೆ ಹೇಳದೆ ಉಂಟೆ? ಸರ್ವಜನೋದ್ಧಾರ ಸಮ್ಮೇಳನಾಂತ ನಾಡಿದ್ದು ಇಲ್ಲಿ ನಡಿಸ್ತೀವಿ. ಮಾಜಿ ಮುಖ್ಯ ಮಂತ್ರಿಗಳು ಬರ್‍ತಾರೆ. ಈಗಿನವರನ್ನೂ ಕರ್‍ದಿದ್ದೀವೆ—ಬಂದ್ರೂ ಬರಬಹುದು.

ತನಿಯ: ಅಯ್ನೋರೂ ಸಭೇಗೆ ಬರ್‍ತಾರಂತೆ? ನಂಗೂ ಹೇಳಿದ್ರು—ಬೊಳ್ಳೀನ ಹಾಡಿಸ್ಬೇಕೂಂತ.

ಸೋಮಪ್ಪ: ಅಲ್ರೀ ಶಾಸ್ತ್ರಿಗಳೇ, ಈ ಸಮ್ಮೇಳನ ಯಾಕೇಂತ ಸೇರ್‍ಸೋದು?

ಶಾಸ್ತ್ರಿ: ತಿಳಿಗೇಡಿಗಳಲ್ವೆ?

ತಮಟೆಗಾರ: ಯಾರು? ಸಮ್ಮೇಳನ ಸೇರ್‍ಸುವವರೆ?

ಸೋಮಪ್ಪ: ಅಲ್ಲ—ಸಮ್ಮೇಳನಕ್ಕೆ ಹೋಗುವವರು!

ಶಾಸ್ತ್ರಿ: ನಮ್ ಜನಕ್ಕೆ ವಿದ್ಯೆ ಇಲ್ಲ! ಇಂಥ ಸಮ್ಮೇಳನ ನಡ್ಸಿ, ತಿಳಿದವರು ಹೇಳ್ಬೇಕು.

ಸೋಮಪ್ಪ: ಏನು ಹೇಳ್ಬೇಕು?

ಶಾಸ್ತ್ರಿ: ಬುದ್ಧಿವಾದ ಹೇಳ್ಬೇಕು. (ಒಳಗೆ ನೋಡಿ) ಸ್ವಲ್ಪ ನೀರು—

ತನಿಯ: ಬೊಳ್ಳೀ— ಒಂದು ಲೋಟ ನೀರು ತಾ!

(ಶಾಸ್ತ್ರಿ ಆಸೆ ತುಂಬಿದ ಕಣ್ಣುಗಳಿಂದ ಬಾಗಿಲ ಕಡೆಗೇ ನೋಡುತ್ತಾನೆ. ಬೊಳ್ಳಿ ಒಂದು ಅಲ್ಯೂಮಿನಿಯಂ ಲೋಟದಲ್ಲಿ ನೀರು ತರುತ್ತಾಳೆ. ಶಾಸ್ತ್ರಿ ಕೈನೀಡಿ ನೀರು ತೆಗೆದುಕೊಳ್ಳುತ್ತಾನೆ. ನೀರು ಕುಡಿದು—)

ಶಾಸ್ತ್ರಿ: (ಬೊಳ್ಳಿಯೊಡನೆ) ಹಾಂ! ಎಷ್ಟು ಓದಿದ್ದಿ? (ಬೊಳ್ಳಿ ತಿರುಗಿ ಹೋಗುತ್ತಾಳೆ)

ತನಿಯ: ನಿಲ್ಲೇ ಅಲ್ಲೀ—

ಸೋಮಪ್ಪ: (ತಮಾಷೆಗೆ) ನಿಲ್ಲಮ್ಮಾ—ನಿಲ್ಲು! ನಾಚಿಕೆ ಪಟ್ಕೊಂಡ್ರೆ ಹೆಂಗೆ?

(ಬೊಳ್ಳಿ ತಿರುಗಿ ನಿಲ್ಲುತ್ತಾಳೆ.)

ಶಾಸ್ತ್ರಿ: ಎಷ್ಟು ಓದಿದ್ದೀಂತ?

ತನಿಯ: ಅವಳನ್ನು ಓದಿಸಿಲ್ಲ. ಅದೆಲ್ಲ ನಮ್ಮಂತವರಿಗೆ ಯಾಕೆಂತ?

ಶಾಸ್ತ್ರಿ: ಅದೂ ನಿಜಾನೆ! ನಾಡಿದ್ದು ನಮ್ಮ ಸಮ್ಮೇಳನದಲ್ಲಿ ನೀನು ಒಂದು ಹಾಡು ಹೇಳ್ಬೇಕು.

(ಬೊಳ್ಳಿ ಮಾತಾಡುವುದಿಲ್ಲ)

ತನಿಯ: ಹಾಡಿಬಿಡೇ ಬೊಳ್ಳಿ! ಅಯ್ನೋರೂ ಹೇಳಿದ್ದಾರೆ.

ಬೊಳ್ಳಿ: ನಾನು ಹಾಡೋಲ್ಲ.

ಸೋಮಪ್ಪ: ಶಾಸ್ತ್ರಿಗಳ ಜೊತೆ ಸೇರಿದ್ ಮೇಲೆ ಹಾಡದಿರೋದೆಂಗೆ?

ಶಾಸ್ತ್ರಿ: (ಹಲ್ಲು ಕಿರಿದು) ನಿಮ್ಗೆಲ್ಲಾ ತಿಳಿದಿದೆ?

ಸೋಮಪ್ಪ: ಒಂದೇ ಊರವನು—ಒಟ್ಟಿಗೆ ಕೆಲ್ಸಾ ಮಾಡುವವರು—ಅಂದ್ಮೇಲೆ ಅದೆಲ್ಲ ತಿಳಿಯದೆ ಇರ್‍ತದೆಯೆ? ಬೊಳ್ಳೀನೇ ಹೇಳಿದ್ಲು—ಬಿಡಿ!

(ಬೊಳ್ಳಿ ಮುಖ ಸೊಟ್ಟಗೆ ಮಾಡಿ ಒಳಗೆ ಹೋಗುತ್ತಾಳೆ.)

ಶಾಸ್ತ್ರಿ: ನೀವೆಲ್ಲಾ ಸೇರಿ ನಡ್ಸಿಕೊಡ್ಬೇಕು!

ಸೋಮಪ್ಪ: ನಾವೇನು ನಡ್ಸೋದು ಮಣ್ಣು? ತಿಳಿಗೇಡಿಗಳು?

(ಅಷ್ಟರಲ್ಲಿ "ಸೋಂಪಾ— ಸೋಂಪಾ—ನನ್ನ ಮಗನನ್ನ ಯಾರೋ ಕೊಂದ್ ಹಾಕಿದ್ರಪ್ಪಾ"—ಎಂದು ಬೊಬ್ಬಿಡುತ್ತಾ ತಲೆಗೆ ಬಡೆದುಕೊಂಡು ಪಾರ್ವತಮ್ಮ ಓಡಿ ಓಡಿ ಬರುತ್ತಾಳೆ. ಜೊತೆಗೆ ಶಾರದೆಯೂ ಇದ್ದಾಳೆ. ಎಲ್ಲರೂ ಎಲ್ಲರೂ "ಹೇಂ—ಹೇಂ—ಏನಾಯ್ತು" ಎಂದು ಗಾಬರಿಯಿಂದ ಎದ್ದು ನಿಲ್ಲುತ್ತಾರೆ.)

ಪಾರ್ವತಮ್ಮ: ಸೋಂಪಾ—ನನ್ನ ರಾಜೂನ—ಯಾರೋ ಹೊಡ್ದು—ಕೊಂದ್ ಹಾಕಿದ್ರಪ್ಪಾ—

ಸೋಮಪ್ಪ: ಯಾರು? ಯಾರು?

(ಶಾಸ್ತ್ರಿ ಯಾರಿಗೂ ಹೇಳದೆ ಮೆಲ್ಲಗೆ ಹೊರಗೆ ಹೋಗುತ್ತಾನೆ.)

ಪಾರ್ವತಮ್ಮ: ಯಾರೂಂತ ಗೊತ್ತಿಲ್ಲಪ್ಪಾ—ನನ್ ಮಗು ಅಲ್ಲಿ ದಾರೀ ಪಕ್ಕದಲ್ಲಿ ಬಿದ್ದಿದ್ಯಪ್ಪಾ—

ತನಿಯ: ಅಯ್ಯೋ! ನನ್ನ ಚಿಕ್ಕ ಅಯ್ನೋರ್ನ ಕೊಂದ್ರಾ! ನಾ ಬಿಡಾಕಿಲ್ಲ—ಕೊಂದವರನ್ನ ಕೊಂದೇನು! (ಎದ್ದು ಓಡುತ್ತಾನೆ.)

ಸೋಮಪ್ಪ: ಸುಮ್ಮನಿರು! ರಾಜಣ್ಣ ಬಿದ್ದಿರೋದು ಎಲ್ಲವ್ವ?

ಪಾರ್ವತಮ್ಮ: (ದೂರಕ್ಕೆ ತೋರಿಸಿ) ಓ ಅಲ್ಲಿ—ದಾರೀ ಮಗ್ಲಲ್ಲಿ!

ಸೋಮಪ್ಪ: (ತಮಟೆಗಾರನೊಡನೆ) ಬಾ—ನಾವು ಹೋಗಿ ನೋಡೋಣ.

(ಸೋಮಪ್ಪ, ತಮಟೆಗಾರ, ತನಿಯ ಅವಸರದಲ್ಲಿ ಹೋಗುತ್ತಾರೆ. ಅವರ ಹಿಂದೆ ಪಾರ್ವತಮ್ಮ ಅಳುತ್ತಾ ಹೋಗುತ್ತಾಳೆ. ಬೊಳ್ಳಿ ಗುಡಿಸಲಿಂದ ಹೊರಗೆ ಬಂದು ಗಾಬರಿಯಿಂದ ಅವರು ಹೋದ ದಿಕ್ಕಿಗೆ ನೋಡುತ್ತಾ ನಿಂತಿದ್ದಾಳೆ.)

— ತೆರೆ —

(ಮುಂದುವರಿಯುವುದು)

ರಷ್ಯಾದ ಶಿಶು ಪ್ರಪಂಚ

ಸೋವಿಯತ್ ರಷ್ಯಾದಲ್ಲಿ ಮಕ್ಕಳ ಸಂರಕ್ಷಣೆಯು ರಷ್ಯಾದ ಪ್ರಥಮ ಕರ್ತವ್ಯವಾಗಿದೆ. ಯುದ್ಧ ಸಮಯದಲ್ಲಿ ಕೂಡಾ ಮೊಟ್ಟಮೊದಲು ಮಕ್ಕಳನ್ನು ರಕ್ಷಿಸುವುದು, ಅವರಿಗೆ ಆಹಾರ ನೀಡುವುದು ಸರ್ಕಾರದ ಕರ್ತವ್ಯವಾಗಿತ್ತು.

1957ರ ಸಾಲಿನಲ್ಲಿ ಮಕ್ಕಳ ವಿದ್ಯೆ ಮತ್ತು ಸಂರಕ್ಷಣೆಗಾಗಿ 78,900,000 ರೂಬಲ್‌ಗಳನ್ನು ಖರ್ಚುಮಾಡಲಾಗಿದೆ.

ಹಳ್ಳಿ ನಗರಗಳಲ್ಲಿ ಹಚ್ಚನೆ ಉದ್ಯಾನವನಗಳು ಮಕ್ಕಳ ಶಾಲೆಗಳಿಗಾಗಿ, ಶಿಶು ಕೇಂದ್ರಗಳಿಗಾಗಿ ಉಪಯೋಗಿಸಲಾಗಿದೆ.

ಇದೀಗ ರಷ್ಯಾದಲ್ಲಿ ಸುಮಾರು 213,000 ಶಾಲೆಗಳಿದ್ದು ಇವುಗಳಲ್ಲಿ 30,000,000 ಮಕ್ಕಳು ವಿದ್ಯಾರ್ಜನೆ ಮಾಡುತ್ತಿದ್ದಾರೆ.

ರಷ್ಯಾದಲ್ಲಿ ಮಕ್ಕಳು ಹುಟ್ಟುವುದೇ ತಡ, ರಾಜ್ಯಾಡಳಿತೆಯು ಅವುಗಳ ಆರೈಕೆಯನ್ನು ನೋಡಿಕೊಳ್ಳುತ್ತದೆ. ಮಕ್ಕಳ ಆರೋಗ್ಯ ಹಾಗೂ ಅಭಿವೃದ್ಧಿಗಾಗಿ ಇಲ್ಲಿ 11,600 ಕ್ಲಿನಿಕ್‌ಗಳು ಮೀಸಲಾಗಿಡಲ್ಪಟ್ಟಿವೆ. ಹುಟ್ಟಿದಂದಿನಿಂದ 7 ವರುಷದ ತನಕ ಅಂದರೆ ಶಾಲೆಗೆ ಸೇರುವ ತನಕ ಈ ಕ್ಲಿನಿಕ್‌ಗಳು ಮಕ್ಕಳ ಆರೋಗ್ಯವರ್ಧನೆ ಹಾಗೂ ಬೆಳವಣಿಗೆಯನ್ನು ನೋಡಿಕೊಳ್ಳುತ್ತವೆ.

ಮಕ್ಕಳ ಆರೈಕೆಗಾಗಿಯೇ 35,000 ವೈದ್ಯರಿದ್ದಾರೆ. 1,000 ಸ್ಯಾನಿಟೋರಿಯಂಗಳಿದ್ದು ಇವುಗಳಲ್ಲಿ ಒಮ್ಮೆಗೆ 100,000 ಮಕ್ಕಳು ಆರೈಕೆ ಪಡೆಯಬಹುದು.

ರಷ್ಯಾದಲ್ಲಿ ಪ್ರತಿ ಮಗುವೂ ಶಾಲೆಗೆ ಹೋಗಲೇ ಬೇಕೆಂದು ಕಡ್ಡಾಯವಿದೆ. ಇನ್ನು ವಿದ್ಯಾರ್ಥಿಗಳಿಗಾಗಿ ಇನ್ನಿತರ ಶಾಲೆಗಳು (ಪಾಯೊನೀರ್ ಶಾಲೆಗಳು) ಇವೆ. ವಿದ್ಯಾರ್ಥಿಗಳದ್ದೇ ನೌಕಾ ಸಂಚಾರ ವ್ಯವಸ್ಥೆ, ರೈಲು ಸವಾರಿಗೆ ವ್ಯವಸ್ಥೆ ಮೊದಲಾದವು ಇವೆ.

ರಜಾ ದಿನಗಳಲ್ಲಿ ಮಕ್ಕಳು ಸಮುದ್ರ ತೀರ ಮತ್ತಿತರ ಉತ್ತಮ ಹವಮಾನವಿರುವ ಜಾಗಗಳಿಗೆ ಕಳಿಸಲ್ಪಡುತ್ತಾರೆ. ಈ ರಜಾ ಕೇಂದ್ರಗಳಲ್ಲಿ 5,500,000 ಮಕ್ಕಳು ತಮ್ಮ ರಜಾಕಾಲವನ್ನು ಸಂತೋಷದಿಂದ ಕಳೆಯುವವು.

ಇನ್ನೊಂದು ಮುಖ್ಯ ಅಂಶವೆಂದರೆ ರಷ್ಯಾದಲ್ಲಿ ಅತ್ಯುತ್ತಮವಾದ, ನೀತಿಯಿಂದ ಕೂಡಿದ ಮಕ್ಕಳ ಪುಸ್ತಕಗಳು ಕೋಟಿಗಟ್ಟಲೆಯಲ್ಲಿ ಪ್ರಕಟವಾಗುತ್ತಿವೆ. ಉತ್ತಮ ಸಾಹಿತಿಗಳು, ಕಲಾವಿದರು, ಕವಿಗಳು ಈ ಬಗ್ಗೆ ವಿಶೇಷ ಆಸಕ್ತಿ ತೋರಿಸುತ್ತಾರೆ.

"ಮನುಷ್ಯನೇ ಮನುಷ್ಯನ ಗೆಳೆಯ" ಎಂಬ ತತ್ವವನ್ನು ಸೋವಿಯತ್ ಮಕ್ಕಳಲ್ಲಿ, ಅವರ ಜೀವನದಲ್ಲಿ, ಶಾಲೆಯಲ್ಲಿ, ಪುಸ್ತಕಗಳಲ್ಲಿ ಕಲಿಸಲಾಗುತ್ತಿದೆ.

ದೆಹಲಿ–ಮೋಸ್ಕೊ ವಿಮಾನ ಸಂಚಾರ

ದೆಹಲಿ ಮತ್ತು ಮೋಸ್ಕೊಗಳ ನಡುವೆ ನೇರವಾಗಿ ವಿಮಾನ ಸಂಚಾರವು ಸ್ವಾತಂತ್ರ್ಯ ದಿನವಾದ ಆಗೋಸ್ಟ್ 15ರಂದು ಪ್ರಾರಂಭವಾಗುವುದೆಂದು ವರದಿಯಾಗಿದೆ. ಬರೇ 8 ಗಂಟೆಗಳಲ್ಲಿ ದೆಹಲಿಯಿಂದ ಮೋಸ್ಕೊ ತಲುಪಬಹುದೆಂದು ಎಣಿಸಲಾಗಿದೆ.

(೩ನೇ ಪುಟ ನೋಡಿ)

ಕೇರಳ ಸಮಾಚಾರಗಳು

'ತಾನೊಂದು ನೆನೆದರೆ ದೈವ ಇನ್ನೊಂದು ನೆನೆಯಿತು'

ಕೇರಳ ಅಸೆಂಬ್ಲಿ ಕಾಂಗ್ರೆಸ್ ಪಕ್ಷದ ಈಗಿರುವ ಬಲದ ಮೇರೆಗೆ ರಾಜ್ಯ ಸಭೆಗೆ ಒಬ್ಬರು ಚುನಾಯಿತರಾಗಬಹುದು. ಈ ಒಬ್ಬರು ಯಾರಾಗಬೇಕೆಂದು ಪ್ರದೇಶ ಕಾಂಗ್ರೆಸ್ಸಿಗೆ ಆಶೆಯಿತ್ತೋ ಆ ಆಶೆ ಕೈಗೂಡಲಿಲ್ಲ. ಮಾಜಿ ಮುಖ್ಯ ಮಂತ್ರಿ ಪನಂಪಳ್ಳಿ ಗೋವಿಂದ ಮೆನನ್, ಶ್ರೀ ಆರ್. ಶಂಕರನ್ ಮತ್ತು ಶ್ರೀಮತಿ ನಫೀಸಾ ಬೀಬಿ ಇವರುಗಳ ಹೆಸರನ್ನು ಆಯ್ಕೆಗಾಗಿ ಹೈಕಮಾಂಡಿಗೆ ಪ್ರದೇಶ ಕಾಂಗ್ರೆಸ್ ಕಳಿಸಿತ್ತು. 'ಆದರೆ ಹೈಕಮಾಂಡ್' ಇವರಾರನ್ನೂ ಗಮನಿಸದೆ, ಶ್ರೀಮತಿ ಉದಯಭಾನು ಇವರ ಆಯ್ಕೆ ಮಾಡಿದೆ.

ಪ್ರದೇಶ ಕಾಂಗ್ರೆಸ್ ನಾಯಕರು ಹೈಕಮಾಂಡಿನ ಆಯ್ಕೆಯಿಂದಾಗಿ ಬಹಳ ನೊಂದಿರುತ್ತಾರೆಂದು ವರದಿಯಾಗಿದೆ. ಪ್ರತಿಸ್ಪರ್ಧಿಗಳಲ್ಲಿ ಒಬ್ಬರಾದ ಆರ್. ಶಂಕರ್ ರವರಿಗೆ ಹೆಚ್ಚಿನ ಕಾಂಗ್ರೆಸ್ ಎಂ. ಎಲ್. ಎ.ಗಳ ಬೆಂಬಲವಿದ್ದು, ಅವರು ತಮ್ಮ ಉಮೇದುವಾರಿಕೆಯನ್ನು ಹಿಂದೆಗೆಯಲು ಬಹಳ ಒತ್ತಡವನ್ನು ಹಾಕಲಾಗಿದೆಯೆಂದೂ ತಿಳಿದುಬಂದಿದೆ, ಅಲ್ಲದೆ ಚಾಲಕುಡಿಯಲ್ಲಿ ಉಪಚುನಾವಣೆ ನಡೆಯಲಿದ್ದು ಅಲ್ಲಿ ಪಿ.ಎಸ್.ಪಿ.—ಕಾಂಗ್ರೆಸ್ ವಿಚಿತ್ರ ಮಿಶ್ರಣ ಸ್ಪರ್ಧಿಗಿಳಿಯುವ ಬಯಕೆ ಈಗಲೂ ಬಾಸಿನಲ್ಲಿಯೇ ಇದೆ. ಅದು ಪನಂಪಳ್ಳಿಯವರ ಕ್ಷೇತ್ರ ಅಲ್ಲಿ ಅವರ ಪ್ರಭಾವವೂ ಇದೆ. ಆದರೆ ಹೋದ ಚುನಾವಣೆಯಲ್ಲಿ ಪಿ. ಎಸ್. ಪಿ.ಯು ಕಮ್ಯೂನಿಸ್ಟ್ ಬೆಂಬಲದಿಂದ ಅಲ್ಲಿ ಗೆದ್ದು ಬಂದಿತ್ತು. ಈ ಬಾರಿ ಕಾಂಗ್ರೆಸ್ಸಿನ ಬೆಂಬಲ ಪಡೆದು ಕಮ್ಯುನಿಸ್ಟರನ್ನು ಸೋಲಿಸಲು ಪಿ. ಎಸ್. ಪಿ ಶತಪ್ರಯತ್ನ ನಡೆಸುತ್ತಿದೆ. ಪನಂಪಳ್ಳಿಯವರಿಗ ಈ ಸಾರಿಯೂ ಪುನಃ ತಾನೇ ಇಲ್ಲಿ ಸ್ಪರ್ಧಿಸಬೇಕು. ಪಿ ಎಸ್. ಪಿ. ಬೆಂಬಲ ಕೊಡಲಿ ಎಂಬ ಹಠ. ಆದರೆ ಇತರ ಕಾಂಗ್ರೆಸ್ಸಿಗರು ಪಿ. ಎಸ್. ಪಿ. ಉಮೇದುವಾರಿಗೆ ಬೆಂಬಲ ಕೊಡಲು ಸಿದ್ಧರಿದ್ದಾರೆ ಕಾಂಗ್ರೆಸ್—ಪಿ. ಎಸ್. ಪಿ.ಯು ಈ ಐಕ್ಯರಂಗದ ಹಾದಿಯಲ್ಲಿ ಕಲ್ಲಿನಂತೆ ನಿಂತಿರುವ ಪನಂಪಳ್ಳಿಯವರನ್ನು ರಾಜ್ಯ ಸಭೆಗೆ ಕಳಿಸಿಯಾದರೂ ಶನಿಕಾಟ ಬಿಡಿಸಬೇಕೆಂಬ ಪ್ರದೇಶ ಕಾಂಗ್ರೆಸ್ಸಿನ ಯತ್ನಕ್ಕೆ ಹೈಕಮಾಂಡ್ ತಣ್ಣೀರು ಹೊಯ್ದಿದೆ.

ಅಂತೂ ಕಮ್ಯೂನಿಸ್ಟರನ್ನು ವಿರೋಧಿಸಲು ಕಾಂಗ್ರೆಸ್ ಪಿ. ಎಸ್. ಪಿ. ಐಕ್ಯರಂಗ ಇನ್ನೂ ನೆಲಮುಟ್ಟಿಲ್ಲ. ಮೊದಲು ಕಚ್ಚಾಡುತ್ತಿರುವ ಕಾಂಗ್ರೆಸ್ ಗುಂಪುಗಳಲ್ಲಿ ಐಕ್ಯರಂಗ ರಚಿಸುವುದೇ ಈಗಿನ ಕೇರಳ ಕಾಂಗ್ರೆಸ್ಸಿನ ಭಗೀರಥ ಯತ್ನ. ಆದರೆ ಈ ಯತ್ನದಲ್ಲಿ ಹೈಕಮಾಂಡ್ ಕೈಕೊಡುತ್ತಿದೆಯಲ್ಲಾ ಎಂಬುದೇ ಕೇರಳ ಕಾಂಗ್ರೆಸ್ ನಾಯಕರ ತಲೆನೋವಾಗಿದೆಯಂತೆ!

ಸಣ್ಣ ಉಳಿತಾಯ ಚಳವಳಿಯಲ್ಲಿ ಕೇರಳ ಕಲಾವಿದ–ಕಾರ್ಮಿಕರ ಪಾತ್ರ

ರಾಷ್ಟ್ರೀಯ ಸಣ್ಣ ಉಳಿತಾಯ ಚಳವಳಿಯನ್ನು ಯಶಸ್ವಿಯಾಗಿಸಬೇಕೆಂದು ಕೇರಳ ಸರ್ಕಾರ ಜನತೆಯಲ್ಲಿ ವಿನಂತಿ ಮಾಡಿದೆ.

ಈ ಕರೆಯ ಮೇರೆಗೆ ಕೇರಳದ ಕಲಾ ತಂಡಗಳು, ಕಾರ್ಮಿಕ ಸಂಘಗಳು ಮುನಿಸಿಪಾಲಿಟಿಗಳು ಮತ್ತು ವ್ಯಾಪಾರಿಗಳು ಕೂಡಾ ಈ ಚಳವಳಿಯಲ್ಲಿ ಭಾಗವಹಿಸಲು ಮುಂಬಂದಿದ್ದಾರೆ.

ಕೇರಳ ಜನತಾ ಕಲಾ ಸಂಘವು ಇದಕ್ಕಾಗಿ ನಾಟಕವನ್ನು ಪ್ರದರ್ಶಿಸಿ, ಕೂಡಿದ ಹಣವನ್ನು ಸಣ್ಣ ಉಳಿತಾಯ ನಿಧಿಗಿತ್ತಿದೆ. ರಾಜ್ಯದ ಸಾರಿಗೆ ಖಾತೆಯ ನೌಕರರ ಸಂಘ 50,000 ರೂಪಾಯಿ ಸಂಗ್ರಹಣ ಮಾಡುವ ವಾಗ್ದಾನ ಮಾಡಿದೆ. ಹಾಗೆಯೇ ಕೇರಳದ ಬೀಡಿ, ಗಿರಣಿ, ನಾರು, ಮುನಿಸಿಪಲ್ ಕ್ಷೇತ್ರದಲ್ಲಿ ದುಡಿಯುವ ಕಾರ್ಮಿಕ ಸಂಘಗಳೂ ಸಣ್ಣ ಉಳಿತಾಯ ನಿಧಿಗೆ ಹಣಸಂಗ್ರಹಣ ಮಾಡಲು ಮುಂಬಂದಿದೆ. ಪಾಲ್ಘಾಟಿನ ವ್ಯಾಪಾರಿಗಳೂ, ಮುನಿಸಿಪಾಲಿಟಿಗಳೂ ಈಗಾಗಲೇ ಈ ನಿಧಿಯಲ್ಲಿ ಹಣ ಕೂಡಿಡಲು ನಿರ್ಧರಿಸಿದೆ

ಸರಕಾರ ಜನರದ್ದೇ ಆದರೆ ಸರಕಾರದ ಯಾವ ಯೋಜನೆಗೂ ಜನತೆಯ ಹಾರ್ದಿಕ, ಕ್ರಿಯಾತ್ಮಕ ಬೆಂಬಲವಿರುತ್ತದೆ ಎಂಬುದನ್ನು ಕೇರಳ ತೋರಿಸಿಕೊಟ್ಟಿದೆ.

ಅಖಿಲ ಕೇರಳ ಸಾಂಸ್ಕೃತಿಕ ಸಂಘದ ರಚನೆ

ಕಳೆದ ತಿಂಗಳಲ್ಲಿ ಟ್ರಿಚೂರಿನಲ್ಲಿ ನಡೆದ ಏಳು ದಿವಸಗಳ ನಾಟಕೋತ್ಸವವು ಕೇರಳದ ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಗತಿಯ ಇನ್ನೊಂದು ಹೆಜ್ಜೆ ಮುಂದಿಟ್ಟಂತಾಗಿದೆ.

ಪಕ್ಷ, ಮತಭೇದಗಳನ್ನು ಮೂಲೆಗೊತ್ತಿ ಎಲ್ಲಾ ಕಡೆಗಳಿಂದಲೂ ಕಲಾವಿದರು, ಕಲಾ ಸಂಘಗಳು ಈ ಉತ್ಸವದಲ್ಲಿ ಉತ್ಸಾಹಿಗಳಾಗಿ ಭಾಗವಹಿಸಿದ್ದಾರೆ. ನಾಟಕೋತ್ಸವದ ಅಧ್ಯಕ್ಷತೆಯನ್ನು 'ಮಾತೃಭೂಮಿ' ಪತ್ರಿಕೆಯ ಸಂಪಾದಕರು ವಹಿಸಿದ್ದು, ಕೇರಳ ರಾಜ್ಯಪಾಲರು ಉದ್ಘಾಟನಾ ಸಮಾರಂಭ ನೆರವೇರಿಸಿದ್ದರು. ಏಳು ದಿವಸಗಳ ಪರ್ಯಂತ ನಡೆದ ನಾಟಕ ಸ್ಪರ್ಧೆಯಲ್ಲಿ ಉತ್ತಮ ನಾಟಕ, ಕಲಾವಿದರಿಗೆ ಪ್ರಶಸ್ತಿ ಕೊಡಲಾಯಿತ.

ಕೊನೆಯದಾಗಿ, ಕಲೋತ್ಸವವು ಒಂದು ಪ್ರಧಾನ ಕಾರ್ಯ ಸಾಧಿಸಿದೆ. ಅದು, ಕೇರಳದ ಎಲ್ಲೆಡೆಗಳಲ್ಲಿರುವ ಕಲಾ ಕೂಟಗಳನ್ನು ಒಂದೇ ಕೇಂದ್ರ ಸಂಘದ ನೆರಳಿಗೆ ತಂದಿರುವುದು. ಅಖಿಲ ಕೇರಳ ಕೇಂದ್ರ ಕಲಾ ಸಮಿತಿಯನ್ನು ರಚಿಸಿ, ಎಸ್. ಕೆ. ಪೊಟ್ಟೆಕ್ಕಾಟ್‌ರನ್ನು ಚೇಯರ್‌ಮೆನ್ನರಾಗಿ ವಿ. ಅಬ್ದುಲ್ಲಾರನ್ನು ಕಾರ್ಯದರ್ಶಿಯಾಗಿಯೂ ಚುನಾಯಿಸಲಾಯಿತು.

ಕೇರಳದಲ್ಲಿ ಕಮ್ಯೂನಿಸ್ಟ್ ಆಡಳಿತೆಯಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಯ ತೀವ್ರ ಪ್ರಗತಿಯು ಯಾವ ಮಟ್ಟದಲ್ಲಿ ಮುನ್ನಡೆಯುತ್ತಿದೆ ಎಂಬುದಕ್ಕೆ ಈ ನಾಟಕೋತ್ಸವವು ಸಾಕ್ಷಿಯಾಗಿದೆ.

ಕಾಂಗ್ರೆಸ್ ಕಲ್ಪಿತ ಅಕ್ಕಿ ಪ್ರಕರಣದ ಮೇಲೆ 'ಕೇರಳ ಕೌಮುದಿ'

ಆಂಧ್ರದಿಂದ ಕೇರಳ ಸರ್ಕಾರವು ಅಕ್ಕಿಯನ್ನು ಕ್ರಯಕ್ಕೆ ಪಡಕೊಂಡ ವಿಷಯವೇ ಒಂದು ಮಹಾಪ್ರಕರಣವಾಗಿ, ಕೇರಳ ಕಮ್ಯೂನಿಸ್ಟ್ ಸರ್ಕಾರದ ಮೇಲೆ ಬ್ರಹ್ಮಾಸ್ತ್ರವನ್ನಾಗಿ ಇದನ್ನು ವಿರೋಧ ಪಕ್ಷಗಳು ಉಪಯೋಗಿಸಿವೆ. 'ಕೇರಳ ಸರ್ಕಾರ ಹೆಚ್ಚು ಹಣ ಕೊಟ್ಟು ಅಕ್ಕಿ ಪಡೆದಿದೆ' ಎಂದು ಶುದ್ಧ ಸುಳ್ಳು ಪ್ರಚಾರ ಈ ಕೆಲವು ತಿಂಗಳುಗಳಿಂದ ಭರದಿಂದ ನಡೆದಿದೆ. ಅಸೆಂಬ್ಲಿಯಲ್ಲಿ ಇದಕ್ಕೆ ಅಂಕಿ ಅಂಶಗಳ ಸಹಿತ ಸಚಿವರು ಉತ್ತರವಿತ್ತಿದ್ದರೂ, ಕಮ್ಯೂನಿಸ್ಟ ದ್ವೇಷಾಂಧ ಕಾಂಗ್ರೆಸ್ ಮತ್ತಿತರ ವಿರೋಧ ಪಕ್ಷಗಳಿಗೆ ಕಣ್ದೆರೆದು ಸತ್ಯವನ್ನು ಕಾಣುವ ಅಪೇಕ್ಷೆಯೇ ಹುಟ್ಟಲಿಲ್ಲ. ಇದೀಗ ಕೇರಳದ ಸ್ವತಂತ್ರ ಪತ್ರಿಕೆಯೊಂದು ಈ ಎಲ್ಲಾ ಅಪಪ್ರಚಾರಗಳಿಗೆ ಯೋಗ್ಯವಾದ, ಕಟು ಉತ್ತರವನ್ನಿತ್ತಿದೆ. ಈ ಪತ್ರಿಕೆಯು ಮಾರ್ಚಿ 4ರ ತನ್ನ ಸಂಪಾದಕೀಯದಲ್ಲಿ ಹೀಗೆ ಬರೆದಿದೆ:

"........ಸರಕಾರದ ವಿರುದ್ಧ ನಾಗಾಸ್ತ್ರ ಮತ್ತು ಗರುಡಾಸ್ತ್ರಗಳೋ ಎಂಬಂತೆ ಭಯಾನಕವಾದ ಅಪಪ್ರಚಾರಗಳನ್ನು ಸೃಷ್ಟಿಸಿ ಪ್ರಯೋಗಿಸಲಾಗುತ್ತಿದೆ. ಆದರೆ ಇದಾವುದೂ ಸರಕಾರಕ್ಕೆ ಘಾಸಿ ಉಂಟು ಮಾಡಲಿಲ್ಲ. 'ಈ ಅಕ್ಕಿ ಪ್ರಕರಣ' ಇತ್ತೀಚಿಗಿನ 'ನಾಗಾಸ್ತ್ರ'ವಾಗಿದೆ. ಈಗ ಪ್ರಚಲಿತವಾಗಿರುವ ಘೋಷಣೆಯೆಂದರೆ ಆಂಧ್ರ ಅಕ್ಕಿ ವ್ಯವಹಾರದಲ್ಲಿ ರೂ. 30 ಲಕ್ಷವನ್ನು ದುರ್ವಿನಿಯೋಗಿಸಿದ ಕಮ್ಯೂನಿಸ್ಟ ಸರ್ಕಾರ ರಾಜಿನಾಮೆ ಕೊಡಬೇಕೆಂಬುದಾಗಿದೆ. ಈ ರೂ. 30 ಲಕ್ಷ ಎಂಬ ಅಂಕಿಯನ್ನು ಇತ್ತುದು ಕೊನ್ನಿಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶ. ಇದು ನಿಜವೆಂದಾದರೆ, ಕಮ್ಯೂನಿಸ್ಟ ಸರಕಾರ, ಒಂದು ಟನ್ ಅಕ್ಕಿಯಲ್ಲಿ ರೂ 600 ಕಳೆದುಕೊಂಡಂತೆ ಆಗುವುದು ಒಂದು ಟನ್ನಿನಲ್ಲಿ 2240 ಪೌಂಡುಗಳಿವೆ. ಒಂದು ಗೋಣಿ ಅಕ್ಕಿಯಲ್ಲಿ 160 ಪೌಂಡುಗಳಿವೆ. ಅಂದರೆ ಒಂದು ಗೋಣಿಗೆ ರೂ. 42-13-0 ರಷ್ಟು ನಷ್ಟವನ್ನು ಮಂತ್ರಿಮಂಡಲ ಅನುಭವಿಸಿದೆ ಎಂದು ತಿಳಿಯಬೇಕು.

ಆದರೆ ಕಮ್ಯೂನಿಸ್ಟ್ ಸರಕಾರ ಹೆಚ್ಚೆಂದರೆ ಒಂದು ಗೋಣಿಗೆ ರೂ. 36-14-6 ಮಾತ್ರ ಇತ್ತಿದೆ. ಈ ಪ್ರಕಾರ ಕಾಂಗ್ರೆಸ್ ಹೇಳಿಕೆಯಂತೆ ಒಂದು ಗೋಣಿಗೆ ಅಕ್ಕಿ ಬೆಲೆ ರೂ. 42—13—0, ರೂಪಾಯಿ 36—14—6, ರೂ. 79—12—4 ಆಗುತ್ತದೆ. ಯಾರೂ ನಂಬಲಾರದಂಥ ಒರಟು ಆಪಾದನೆ ಇದು. ಈ ನಾಗಾಸ್ತ್ರವನ್ನು ಕೇರಳ ಕಾಂಗ್ರೆಸ್ ಕರ್ಣ ಪಿ. ಟಿ. ಚಾಕೊ ಕೊನ್ನಿಯಲ್ಲಿ ನಡೆದ ಸಮಾವೇಶದಿಂದ ಕಮ್ಯೂನಿಸ್ಟ್ ಅರ್ಜುನ ಆಹಾರ ಮಂತ್ರಿ ಕೆ. ಸಿ. ಜೋರ್ಜ್‌ರ ತಲೆ ಕಡೆಗೆ ಎಸೆದರು........" ಎಂದು ಹಾಸ್ಯವಾಗಿ ಬಣ್ಣಿಸಿ ಬರೆದಿದೆ.

ಕಮ್ಯೂನಿಸ್ಟ್ ಸರಕಾರದ ಮೇಲೆ ಏನೇನು ಅಪಪ್ರಚಾರ, ಅಪನಿಂದೆ, ಸುಳ್ಳು ಆಪಾದನೆ ನಡೆಸಲಾಗುತ್ತಿದೆ ಎಂಬುದಕ್ಕೆ ಇದೊಂದು ನಿದರ್ಶನ ಮಾತ್ರ. ಕೇರಳ ಕಾಂಗ್ರೆಸ್—ಕಮ್ಯೂನಿಸ್ಟರನ್ನು ಬೈಯುವುದೇ ತಮ್ಮ ಜನ್ಮಸಿದ್ಧ ಹಕ್ಕೆಂದು ಬಗೆದಂತಿದೆ. ಬೈಯುವುದಕ್ಕೆ ಸತ್ಯಾಂಶಗಳ ಕೊರತೆ ಬಿದ್ದರೆ ಸುಳ್ಳಿನ ಸುರಿಮಳೆಗೆ ಬರವಿಲ್ಲ ತಾನೆ! ಹುಸಿ ನುಡಿಯುವವರಲ್ಲಿ ಅಗ್ರಗಣ್ಯರಾದ ಕೇರಳ ಕಾಂಗ್ರೆಸ್ಸಿಗರಿಗೆ ಪದ್ಮಭೂಷಣವನ್ನು ಕೊಡುವ ಏರ್ಪಾಡಾದರೂ ಮಾಡಬೇಕು. ಗೋಡೆಯಲ್ಲಿ ಕಮ್ಯೂನಿಸ್ಟರ ಚಿತ್ರ ಬರೆದು ಅವರೊಡನೆ ಕಾದಾಡಿ ತನ್ನ ದ್ವೇಷವನ್ನು ತೀರಿಸುವಷ್ಟು ಶೂರರಾದ ಡಾನ್ ಕ್ವಿಕ್ಸೋಟ್‌ನ ಜಾತಿಗೆ ಸೇರಿದವರೇ ಕೇರಳ ಕಾಂಗ್ರೆಸ್ಸಿನಲ್ಲಿದ್ದಾರೆ. ಆಡಳಿತೆಯಲ್ಲಿ ಕಮ್ಯೂನಿಸ್ಟರು ಸಾಧಿಸುತ್ತಿರುವ ಯಶಸ್ಸು ಕಾಂಗ್ರೆಸ್ಸಿಗರನ್ನು ಕುಟುಕುತ್ತಿದೆ—ಕಳ್ಳು ಕುಡಿದ ಮರ್ಕಟಕ್ಕೆ ಚೇಳು ಕುಟುಕಿದಂತೆ.

—೦—

ದೆಹಲಿ-ಮಾಸ್ಕೋ ವಿಮಾನ ಸಂಚಾರ

(೭ನೇ ಪುಟದಿಂದ)

ಈ ಬಗ್ಗೆ ಈಗಾಗಲೇ ಮಾತುಕತೆ ಮುಗಿದಿದೆ. ಅಲ್ಲದೆ ಬ್ರಿಟಿಷ್ ಯುರೋಪಿಯನ್ ಏರ್‌ವೇಸ್‌ನವರು ರಷ್ಯಾದೊಡನೆ ಮಾಡಿದ ಒಡಂಬಡಿಕೆಯಿಂದಾಗಿ, ಇನ್ನು ಮೋಸ್ಕೊ ಮೂಲಕ ಲಂಡನಿಗೆ ಪ್ರಯಾಣ ಬೆಳೆಸಬಹುದು. ಈಗ ಬಳಸಲಾಗುತ್ತಿರುವ ಪಶ್ಚಿಮ ಏಷಿಯಾ ದಾರಿಗಿಂತ ಕಮ್ಮಿ ಅವಧಿಯಲ್ಲಿ ಈ ಪ್ರಯಾಣವನ್ನು ಮಾಡಬಹುದು.

ರಷ್ಯಾದಲ್ಲಿ 25 ಮಂದಿ ಮಹಿಳಾ ಮಂತ್ರಿಗಳು!

ಸೋವಿಯತ್ ಒಕ್ಕೂಟದ ಆರೋಗ್ಯ ಶಾಖೆಯ ನಿರ್ದೇಶನ ಕಾರ್ಯವನ್ನು ನಡೆಸುತ್ತಿರುವವರು ಒಬ್ಬರು ಮಹಿಳಾ ಮಂತ್ರಿ, ಮಾರಿಯಾ ಕೋವ್ರಿಗೀನಾ!

ಕಿರ್ಘಿಜಿಯಾ ಪ್ರಜಾತಂತ್ರದ ಉಪ ಪ್ರಧಾನಿ ಮತ್ತು ವಿದೇಶಾಂಗ ಮಂತ್ರಿ ಒಬ್ಬ ಮಹಿಳೆಯೇ ಆಗಿದ್ದಾರೆ.

ಆರ್ಮೇನಿಯದಲ್ಲಿ ಒಬ್ಬ ಮಹಿಳೆಯು ಹಣಕಾಸಿನ ಮಂತ್ರಿಯ ಕೆಲಸ ಮಾಡುತ್ತಿದ್ದಾರೆ.

ಲಾತ್ವಿಯಾದಲ್ಲಿ ನ್ಯಾಯಾಂಗ ಸಚಿವ ಸ್ಥಾನದಲ್ಲಿರುವವರೂ ಮಹಿಳೆಯೇ.

ರಶಿಯನ್ ಸಂಯುಕ್ತ ಪ್ರಜಾತಂತ್ರದಲ್ಲಿ ಮಹಿಳೆಯೊಬ್ಬಳೆ ಸಂಸ್ಕೃತಿ ಶಾಖೆಯ ಸಚಿವೆಯಾಗಿದ್ದಾರೆ.

ಒಟ್ಟಿನಲ್ಲಿ ೨೫ ಮಂದಿ ಸೋವಿಯೆತ್ ಮಹಿಳೆಯರು ಮಂತ್ರಿಗಳಾಗಿದ್ದಾರೆ!

ಸೋವಿಯೆತ್ ಉಪಗ್ರಹದ ಸುತ್ತುಗಳು

12-3-'58ರ ಪ್ರಾತಃಕಾಲ ೮-೩೦ರ [ಭಾರತೀಯ ಕಾಲಮಾನ] ವೇಳೆಗೆ ಸೋವಿಯತ್ ದ್ವಿತೀಯ ಉಪಗ್ರಹವು ಪೃಥ್ವಿ ಸುತ್ತಲೂ ೧,೭೦೬ ಪ್ರದಕ್ಷಿಣೆಗಳನ್ನು ಮಾಡಿ ಮುಗಿಸಿದೆ. —'ತಾಸ್'

ಮಂಗಳೂರು ಪತ್ರ

ಮಜೂರರಿಗೆ ಶಿಕ್ಷೆ !

ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಪಾಣೆ ಮಂಗಳೂರಿನಲ್ಲಿ ಹೋಟೆಲ್ ಮಾಲಿಕರಿಗೊಬ್ಬರಿಗೆ ಹೊಡೆದರೆಂಬ ಆರೋಪ ಹೊರಿಸಿ ಬಂಟ್ವಾಳ ದಪೋಲೀಸರು ಪುತ್ತೂರು ಮೆಜಿಸ್ಟ್ರೇಟರ ಕೋರ್ಟಿನಲ್ಲಿ 17 ಮಂದಿ ಬೀಡಿ ಮಜೂರರ ಮೇಲೆ ಹೂಡಲಾಗಿದ್ದ ಖಟ್ಲೆಯಲ್ಲಿ ನ್ಯಾಯಾಧೀಶರು 9 ಮಂದಿ ಮಜೂರರಿಗೆ 2 ರಿಂದ 3 ತಿಂಗಳಗಳ ತನಕ ಕಠಿನ ಶಿಕ್ಷೆಯನ್ನು ವಿಧಿಸಿದ್ದಾರೆ. ಉಳಿದ 8 ಮಂದಿಯನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಿದ್ದಾರೆ.

ಸದ್ರಿ ಹೋಟೆಲ್ ಮಾಲಿಕರು ಕಾಂಗ್ರೆಸ್ಸಿನ ಪರವಾಗಿ ಕಳೆದ ಚುನಾವಣೆಯಲ್ಲಿ ಕೆಲಸ ಮಾಡಿದ್ದವರೆಂದೂ, ನಂತರ ಆ ರಾಜಕೀಯ ಉದ್ದೇಶ ಬೆಳೆದು ಬಂದಿತ್ತೆಂದೂ ಸದ್ರಿ ಮಾಲಿಕರು ಕಲ್ಯಾಣಿ ಎಂಬ ಕೆಲಸಗಾರ್ತಿಗೆ ಉಪಟಳ ಕೊಡುತ್ತಿದ್ದರೆಂದೂ ಇದಕ್ಕಾಗಿ ಈ ಬಾಯಿದೆ ಮಜೂರರು ಹೋಟೇಲಿಗೆ ನುಗ್ಗಿ ಹೊಡೆದಿದ್ದರೆಂದೂ ಪ್ರಾಸ್ಯಕೂಶನ್ ವಾದವಿತ್ತು.

ಇದು ಕೇವಲ ರಾಜಕೀಯ ದ್ವೇಷ ಸಾಧನೆಯಿಂದ ಮಾಡಿದ ಖಟ್ಲೆಯೆಂದೂ ಕಲ್ಯಾಣಿ ಎಂಬ ಕೆಲಸಗಾರ್ತಿಗೆ ಮಾಲಕರು ಉಪಟಳ ಕೊಡುತ್ತಿದ್ದು ಒಂದು ದಿನ ಅಲ್ಲಿ ಯಾರೂ ಇಲ್ಲವೆಂದು ಇವರ ಮನೆ ಅಂಗಳಕ್ಕೆ ಹೋಗಿ ಆಕೆಯನ್ನು ಅವಹೇಳನ ಮಾಡಿದರೆಂದೂ ಇದರಿಂದ ಸಿಟ್ಟಿಗೆದ್ದ ಕಲ್ಯಾಣಿ ಮತ್ತು ಬೇರಿಬ್ಬರು ಇವರಿಗೆ ಹೊಡೆದುದೆಂದೂ ಆರೋಪಿಗಳ ಪರವಾದಿಸಲಾಗಿತ್ತು.

ಮೆಜಿಸ್ಟ್ರೇಟರು ಪ್ರಾಸ್ಯಕ್ಯೂಶನ್ ವಾದವನ್ನೇ ಎತ್ತಿ ಹಿಡಿದು ಶ್ರೀಗಳಾದ ದೊಂಬಯ್ಯ ಸಪಲ್ಯ, ನಾರಾಯಣಸಪಲ್ಯ, ತಿಮ್ಮಪ್ಪ ಪೂಜಾರಿ, ಬಾಬುಸಪಲ್ಯ ಇವರಿಗೆ ತಲಾ 3 ತಿಂಗಳ ಶಿಕ್ಷೆಯನ್ನು, ಲಕ್ಷ್ಮಣ ಪೂಜಾರಿ, ನಾರಾಯಣ ಪೂಜಾರಿ, ಮೋನಪ್ಪಸಪಲ್ಯ, ಲಕ್ಷ್ಮಣಸಪಲ್ಯ, ಅಬ್ಬುಬ್ಯಾರಿ ಈ ಐದುಮಂದಿಗೆ ತಲಾ 2 ತಿಂಗಳ ಶಿಕ್ಷೆಯನ್ನು ವಿಧಿಸಿದ್ದಾರೆ.

ಈ ಶಿಕ್ಷೆಯು ವಿರುದ್ಧ ಆರೋಪಿಗಳು ಜಿಲ್ಲಾ ಕೋರ್ಟಿಗೆ ಅಪೀಲುಮಾಡಿದ್ದಾರೆ!

ಸರಕಾರಿ ವಕೀಲರ ನೇಮಕದಲ್ಲಿ ಪಕ್ಷಪಾತ

ಜಿಲ್ಲೆಯಲ್ಲಿ ಸರಕಾರಿ ವಕೀಲರುಗಳನ್ನು ನೇಮಿಸುವ ವಿಚಾರದಲ್ಲಿ ಮೈಸೂರು ಸರಕಾರದ ಕಾನೂನು ಖಾತೆ ಕುಲಪಕ್ಷಪಾತ ಮಾಡಿದೆ ಎಂಬ ಆರೋಪಗಳು ಇಲ್ಲಿ ಕೇಳಿ ಬಂದಿದೆ.

ಉಡುಪಿ ಕುಂದಾಪುರ ಕೋರ್ಟುಗಳಲ್ಲಿ ಸರಕಾರಿ ವಕೀಲರನ್ನು ನೇಮಿಸುವ ಕುರಿತು ಅರ್ಜಿಗಳನ್ನು ಕರೆಯಲಾಗಿತ್ತೆಂದೂ, ಆದರಂತೆ ಬಂದ ಅರ್ಜಿಗಳನ್ನು ಡೆ। ಕಮಿಷನರ್, ಜಿಲ್ಲಾ ಪೋಲೀಸ್ ಸೂಪರಿಡೆಂಟ್ ಮತ್ತು ಸರಕಾರೀ ವಕೀಲರು ಇರುವ ಒಂದು ಸಮಿತಿ ಪರಿಶೀಲಿಸಿ ಇಬ್ಬರನ್ನು ಈ ಬಗ್ಗೆ ಶಿಫಾರಸ್ಸು ಮಾಡಿತೆಂದೂ, ಮತ್ತು ಡೆ। ಕಮಿಶನರರು ಇವರ ನೇಮಕದ ಬಗ್ಗೆ ಆಜ್ಞೆ ಹೊರಡಿಸಿದರೆಂದೂ, ಬಳಿಕ ಈ ಅಜ್ಞೆಯನ್ನು ರದ್ದುಪಡಿಸಿ ಕಾನೂನು ಇಲಾಖೆಯ ಅಸಿಸ್ಟೆಂಟ್ ಸೆಕ್ರೆಟರಿಯವರು ಒಂದು ಆಜ್ಞೆ ಹೊರಡಿಸಿ ನೇಮಕದಲ್ಲಿ ಬದಲಾವಣೆ ಮಾಡಿದರೆಂದೂ ವರದಿಯಾಗಿದೆ.

ಈ ವಿಷಯದಲ್ಲಿ ಸರಕಾರ ಕುಲ ಪಕ್ಷಪಾತ ಮಾಡಿದೆ ಎಂದು ಆರೋಪಮಾಡಲಾಗುತ್ತಿದೆ. ಈ ಬಗ್ಗೆ ಸರಕಾರ ಯೋಗ್ಯ ವಿವರಣೆ ಕೊಡಬೇಕಾದುದು ಅತ್ಯಾವಶ್ಯಕ.

ಗೇರುಬೀಜ ಮಜೂರರ ವಿಜಯ

ಕಳೆದ ತಾ. 20 ರಿಂದ ಮಂಗಳೂರಿನ ಸ್ವಸ್ತಿ ಗೇರುಬೀಜ ಕಾರ್ಖಾನೆಯ 560 ಮಂದಿ ಸ್ತ್ರೀಮಜೂರರ ಧರಣಿ ಮುಷ್ಕರವು ಕಳೆದ ತಾ. 3ರಂದು ರಾಜಿ ಪಂಚಾತಿಕೆಯಾಗಿ ಸಂಧಾನದಲ್ಲಿ ಕೊನೆಗೊಂಡಿತು.

ಕಾರ್ಖಾನೆಯಲ್ಲಿ ಕಳೆದ ಒಂದೆರಡು ವರುಷಗಳಿಂದ ಕೆಲಸವಿಲ್ಲದಿದ್ದ ಸುಮಾರು 60 ಮಂದಿ ಮಜೂರರಿದ್ದಾರೆ. ಈ ಮಜೂರರು ಕೆಲಸಕೇಳ ಬಂದಾಗ ಮ್ಹಾಲಕರು ನಾಳೆ ನಾಳೆ ಎಂದು ಕಾಲಹರಣ ಮಾಡುತ್ತಿದ್ದರು. ಆದರೆ ಈ ಬಾರಿ ಹೊಸ ಕೆಲಸಗಾರರನ್ನು ಕೆಲಸಕ್ಕೆ ಸೇರಿಸುವ ಸಂದರ್ಭ ಬಂದಾಗ ಈ ಅನುಭವವುಳ್ಳ ಹಳೆಯ ಮಜೂರರನ್ನು ಕೆಲಸಕ್ಕೆ ಸೇರಿಸದೆ, ಮ್ಹಾಲಕರ ಕೈಗೊಂಬೆಗಳೆಂದು ಹೇಳಲಾದ 10 ಮಂದಿಯನ್ನು ಗ್ರೇಡಿಂಗ್ ವಿಭಾಗಕ್ಕೆ ಸೇರಿಸಿದರೆಂದೂ ಇದನ್ನು ವಿರೋಧಿಸಿ ಮ್ಹಾಲಕರೊಡನೆ ವಿನಂತಿ ಮಾಡಿಕೊಂಡಿದ್ದಕ್ಕೆ ಮ್ಯಾನೇಜ್‌ಮೆಂಟಿನವರು ಹೀನಾಮಾನವಾಗಿ ಬೈದರೆಂದೂ ತಿಳಿದು ಬಂದಿದೆ. ಇದನ್ನು ಪ್ರತಿಭಟಿಸಿ ಈ ಹೋರಾಟ ಆರಂಭವಾಯಿತು.

ಮೊದಲು ಯಾವ ಪಂಚಾತಿಕೆಗೂ ಸಿದ್ಧರಿಲ್ಲದಿದ್ದ ಮ್ಹಾಲಕರು ಮಜೂರರ ಈ ದೀರ್ಘವಾದ ಐಕ್ಯ ಹೋರಾಟವನ್ನು ಕಂಡು ಸಂಧಾನಕ್ಕೆ ಬಂದರು. ಅದರಂತೆ ಈ 10 ಮಂದಿ ಹೊಸ ಮಜೂರರನ್ನು ಶೆಲ್ಲಿಂಗ್ ಮತ್ತು ಪೀಲಿಂಗ್ ವಿಭಾಗಕ್ಕೆ ಹಾಕಬೇಕೆಂದೂ ಗ್ರೇಡಿಂಗ್ ವಿಭಾಗಕ್ಕೆ ಇಬ್ಬರು ಹಳೆಯ ಮಜೂರರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಶೆಲ್ಲಿಂಗ್ ಮತ್ತು ಪೀಲಿಂಗ್ ಭಾಗದಿಂದ ಅಪೇಕ್ಷೆಯುಳ್ಳ 10ಮಂದಿ ಮಜೂರರನ್ನು ಗ್ರೇಡಿಂಗ್ ವಿಭಾಗಕ್ಕೆ ಹಾಕಬೇಕೆಂದು ತೀರ್ಮಾನವಾಯಿತು.

ಈ ಹೋರಾಟದಲ್ಲಿ ಮಜೂರರು ಐಕ್ಯವನ್ನು ಪ್ರದರ್ಶಿಸಿ ವಿಜಯಗಳಿಸಿದ್ದಾರೆ.

ಜಿಲ್ಲಾ ಮಜೂರ ಸಮ್ಮೇಳನಕ್ಕೆ ಸಿದ್ಧತೆ

ಇದೇ ತಾ. 16, 17, 18, ಈ ಮೂರು ದಿನಗಳಲ್ಲಿ ಜಿಲ್ಲಾ ಮಜೂರರ 6ನೇ ಸಮ್ಮೇಲನವು ಮಂಗಳೂರಿನಲ್ಲಿ ಜರಗಲಿರುವುದು. ಈ ಸಮ್ಮೇಲನಕ್ಕೆ ಈಗಾಗಲೇ ಭರದಿಂದ ಸಿದ್ಧತೆಗಳು ನಡೆಯುತ್ತಿವೆ. ಸುಮಾರು 12 ಸಾವಿರ ಮಂದಿ ಮಜೂರರನ್ನು ಸ್ವಾಗತಸಮಿತಿ ಸದಸ್ಯರನ್ನಾಗಿ ಮಾಡಲಾಗಿದೆ. ಅಲ್ಲಲ್ಲಿ ಕಾರ್ಯಕರ್ತರುಗಳ ಸಭೆ ಜರಗಿ ಸಮ್ಮೇಲನದ ಯಶಸ್ವಿಗಾಗಿ ಬೇಕಾದ ಕಾರ್ಯಕ್ರಮಗಳನ್ನು ಹಾಕಲಾಗುತ್ತಿದೆ. ಹಲವಾರು ಕಡೆ ಸಾರ್ವಜನಿಕ ಸಭೆಗಳನ್ನು ಕರೆದು ಈ ಸಮ್ಮೇಲನದ ಮಹತ್ವವನ್ನು ವಿವರಿಸಲಾಗುತ್ತಿದೆ.

ತಾ. 16, 17 ಈ ಎರಡು ದಿನಗಳಲ್ಲಿ ಕುಲಶೇಖರದಲ್ಲಿ ಪ್ರತಿನಿಧಿ ಸಭೆ ಸೇರುವುದು. 18ರಂದು ಕೇಂದ್ರ ಮೈದಾನದಲ್ಲಿ ಬಹಿರಂಗ ಅಧಿವೇಶನ ಜರಗುವುದು.

ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ಮುಂಬೈ ಕಾರ್ಪೊರೇಷನಿನ ಸ್ಟಾಂಡಿಗ್ ಕಮಿಟಿ ಅಧ್ಯಕ್ಷರೂ ಎ.ಐ.ಟಿ.ಯು.ಸಿ.ಯ ಅಧ್ಯಕ್ಷರೂ ಆದ ಶ್ರೀ ಎಸ್.ಎಸ್. ಮಿರಜ್‌ಕರ್ ಇವರು ವಹಿಸುವರು. ಕೆ.ಪಿ.ಟಿ.ಯು.ಸಿ.ಯ ಉಪಾಧ್ಯಕ್ಷರಾದ ಶ್ರೀ ಬಿ. ವಿ. ಕಕ್ಕಿಲ್ಲಾಯರು ಸಮ್ಮೇಲನವನ್ನು ಉದ್ಘಾಟಿಸುವರು. ಕಾಸರಗೋಡಿನ ರೈತರ ಮುಖಂಡ ಕಾ। ಎ. ಸುಬ್ಬರಾಯರು ಧ್ವಜಾರೋಹಣ ಮಾಡುವರು.

ಬಹಿರಂಗ ಅಧಿವೇಶನದಂದು ರಾತ್ರಿ ಇದೀ ಸಾಂಸ್ಕೃತಿಕ ಕಾರ್ಯಕಲಾಪಗಳಿವೆ.

—"ಶ್ರೀನಿವಾಸ್"

ಕೇರಳದಲ್ಲಿ—

ಲಂಚ-ಬಡುಕತನದ ವಿರುದ್ಧ ಹೋರಾಟ ಅಧಿಕಾರಿಗಳ ಮೇಲೆ ಕ್ರಮ

ಗುರುತರವಾದ ಅಪಾದನೆಗಳನ್ನು ಹೇರಲಾಗಿರುವ ಅಧಿಕಾರಿಗಳ ಮೇಲೆ ತೀವ್ರ ಕ್ರಮ ತೆಗೆದು[illegible] ಕೇರಳ ಸರಕಾರ [illegible]. ಯಾರೇ ಆಗಲಿ ಲಂಚ ಬಡುಕತನ, ದುರ್ನಡತೆ ಹಾಗೂ ಇನ್ನಿತರ ಪಾತಕಗಳನ್ನು ಮಾಡಿರುವುದು ತಿಳಿದುಬಂದಲ್ಲಿ ಅವರನ್ನು ಸಾರ್ವಜನಿಕವಾಗಿ ವಿಚಾರಣೆಗೆ ಗುರಿಪಡಿಸಲು, ಲಂಚಗುಳಿತನ ನಿಷೇಧ—ವಿಶೇಷ ನ್ಯಾಯಾಧೀಶರನ್ನು ಮತ್ತು ವಿಚಾರಣಾ ಕಮಿಷನರ್‌ರನ್ನು ನೇಮಕ ಮಾಡಲಾಗಿದೆ.

ಈಗಾಗಲೇ ಒಬ್ಬ ಡಿವಿಷನಲ್ ಆಫಿಸರ್, ಸಬ್ ಡಿವಿಷನಲ್ ಆಫೀಸರ್ ಮತ್ತು ರೇಂಜ್ ಆಫೀಸರ್ ಇವರನ್ನು ಸಸ್ಪೆಂಡ್ ಮಾಡಲಾಗಿದ್ದು, ಅವರನ್ನೀಗ ಕೆಲಸದಿಂದ ವಜಾ ಮಾಡಲಾಗಿದೆ. ಈ ಅಧಿಕಾರಿಗಳು ದುರ್ನಡತೆಯವರೂ ಮತ್ತು ಕರ್ತವ್ಯ ವಿಮುಖರೂ ಆಗಿದ್ದಾರೆಂದು ಸ್ಪಷ್ಟೀಕರಿಸಲಾಗಿದೆ.

ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಒಬ್ಬ ವಿಶೇಷ ನಾರು ಕೈಗಾರಿಕೆಯ ಅಧಿಕಾರಿ, ಇಬ್ಬರು ಟ್ರಾಫಿಕ್ ಇನ್‌ಸ್ಪೆಕ್ಟರುಗಳು, ಓರ್ವ ಸಬ್ ಮೆಜಿಸ್ಟ್ರೇಟ, ಮತ್ತೊಬ್ಬ ಅಕೌಂಟೆಂಟ್ ಮತ್ತಿತರ ಡಿವಿಷನ್ ಅಧಿಕಾರಿಗಳು ಹಾಗೂ ಅರಣ್ಯಾಧಿಕಾರಿಗಳು, ಇವು ಜನರ ವಿರುದ್ಧ ಅಧಿಕಾರದ ದುರುಪಯೋಗ ಹಣದ ದುರ್ವಿನಿಯೋಗ, ಲಂಚಗುಳಿತನ ಮತ್ತಿತರ ಆಪಾದನೆಗಳು ಹೇರಲಾಗಿದ್ದು, ಸಾರ್ವಜನಿಕರು ಇವರ ಮೇಲೆ ದೂರು ಹೊರಿಸಿದ್ದರು.

ಕೇರಳ ಸರ್ಕಾರ ಕೂಡಲೇ ಇದನ್ನು ಕೈಗೆತ್ತಿಕೊಂಡು ಆರಂಭದ ತನಿಖೆ ನಡೆಸಿತು. ಇವರೆಲ್ಲರ ವಿರುದ್ಧ ಹೊರಿಸಿದ ದೂರು ಮತ್ತು ಆಪಾದನೆಗಳಲ್ಲಿ ಸತ್ಯಾಂಶವಿದೆಯೆಂದು ಕಂಡುಬಂದ ಕಾರಣ ಈ ಬಗ್ಗೆ ತಕ್ಷಣ ಸಾರ್ವಜನಿಕ ವಿಚಾರಣೆಯಾಗಬೇಕೆಂದು ಆಜ್ಞೆ ಮಾಡಿದೆ. ಹಲವೆಡೆಗಳಲ್ಲಿ ಜನರು ಇವರ ಮೇಲಿನ ತಮ್ಮ ದೂರುಗಳನ್ನು ಹೇಳಲು ವಿಶೇಷ ನ್ಯಾಯಾಧೀಶ ಹಾಗೂ ವಿಚಾರಣಾ ಕಮಿಷನರ್ ಮುಂದೆ ಬರಬೇಕೆಂದು ಕೇಳಿಕೊಳ್ಳಲಾಗಿದೆ. ಇದು ನಮ್ಮ ನೆರೆಯ ರಾಜ್ಯ ಕೇರಳದಲ್ಲಿನ ಸರಕಾರದ [illegible] ಆದರ್ಶ.

ನಮ್ಮ ಮೈಸೂರಿನಲ್ಲಿ........

ಆದರೆ ನಮ್ಮ ಮೈಸೂರು ರಾಜ್ಯದಲ್ಲಿ ನಡೆಯುತ್ತಿರುವುದೇನು? ಕೇರಳ ಸರಕಾರದ ಪ್ರಗತಿ ಹಾಗೂ ಜನಹಿತಕಾರಿ ನೀತಿಯ ಪ್ರಭಾವ ನಮ್ಮ ಸಾಮಾನ್ಯ [illegible]ಯ ಮೇಲಾದರೂ ನಮ್ಮ ಕಾಂಗ್ರೆಸ ಆಡಳಿತಕ್ಕೆ ಇದು ಏನೇನು ತಿಳಿದಿಲ್ಲವೆಂಬಂತೆ ಅಧಿಕಾರಾಂಧರಾಗಿಯೇ ಇನ್ನೂ ಮೆರೆಯುತ್ತಿದ್ದಂತಿದೆ. ಇಲ್ಲಿ ಕಾರ್ಮಿಕರನ್ನು ಗುಂಡಿಕ್ಕಿ ಕೊಂದರೆ ಅಸೆಂಬ್ಲಿಯಲ್ಲಿ ನಿರ್ಣಯ ಮಂಡಿಸಲು ಅವಕಾಶವಿಲ್ಲ. ಮತ್ತೆ ವಿಚಾರಣೆ ಪ್ರಶ್ನೆಯಲ್ಲಿ ಬಂತು? 'ಲಂಚ, ಲಂಚ, ಲಂಚ' ಎಂದು ವಿಧಾನ ಸೌಧ [illegible] ಕಂಭ ಕಂಭಗಳು [illegible] ಕೇಳುತ್ತಿದ್ದರೂ ನಮ್ಮ [illegible]ಕ್ಕೆ ಇದು ಕಾಣೋಲ್ಲ.

ಸಾಮಾಜಿಕ ಅಭಿವೃದ್ಧಿ ಯೋಜನೆಗಳಾದ ಗುಡಿಕೈಗಾರಿಕೆ, ಸಮಾಜ ಕಲ್ಯಾಣ ಯೋಜನೆ, ಅಂಬರ ಚರಕಾ ಯೋಜನೆಗಳಿಗಾಗಿ, ಕೇಂದ್ರದಿಂದ ಬರುತ್ತಿರುವ [illegible] ರೂಪಾಯಿಗಳು [illegible] ಯೆಂದ ಇನ್ನೂ ತಿಳಿದಿಲ್ಲ. ಸಹಕಾರಿ ಸಂಸ್ಥೆ ಮತ್ತು ಬ್ಯಾಂಕುಗಳ ಹಣ ಕಬಳಿಸುವ ಸಣ್ಣ ಪುಟ್ಟ ಮುಂಧಾರರ ಮೇಲೆ ಸರಕಾರಿ ಅಧಿಕಾರಿಗಳೇ ವಿಚಾರಣೆಯಾಗಬೇಕೆಂದು ಒತ್ತಾಯಿಸಿದರೂ ಇದುವರೆಗೆ ಲೆ ವಿಚಾರಣೆಯಾಗುವುದಿಲ್ಲ. (ಈ ಸಂಬಂಧದಲ್ಲಿ ವಿವರವಾಗಿ ಈ ಹಿಂದೆ ಸಿವಿಲ್ ಸ್ಟೇಷನ್ ಕೊ-ಒಪರೇಟಿವ್ ಸೊಸೈಟಿಯ ಬಗ್ಗೆ 'ಜನಶಕ್ತಿ' ತಿಳಿಸಿದೆ.) ಇತ್ತೀಚೆಗೆ ಚಿನ್ನ ಸಹಿತ ಸಿಕ್ಕಿದ ಚಿನ್ನದ ಮನುಷ್ಯರು ನ್ಯಾಯಕ್ಕೆ ಗಿಲೀಟು ಹಚ್ಚಿಪಾರಾದರೂ ವಿಚಾರಣೆಯಾಗುವುದಿಲ್ಲ.

ಪೋಲೀಸ್ ಸ್ಟೇಷನ್‌ಗಳು ಜಾರತನದ, ರಾಕ್ಷಸೀ ಕೃತ್ಯಗಳ ಮತ್ತು ಕ್ರೌರ್ಯದ ಕಾಡು ಗುಹೆಯಂತೆ (ಮುನಿಯಮ್ಮನ ಮೇಲೆ ನಡೆವ ಅತ್ಯಾಚಾರವನ್ನು ಈ ಹಿಂದೆಯೇ ಕೊಡಲಾಗಿದೆ, ಇದೀಗ ಇನ್ನೊಂದು ನಡೆದಿದೆ. ಇದ್ದರೂ ಈ ಬಗ್ಗೆ ವಿಚಾರಣೆ ಮಾಡಲು ಮೈಸೂರು ಸರಕಾರ ತಯಾರಿಲ್ಲ. ಮೈಸೂರಿನಲ್ಲಿ ಪೋಲೀಸರು ಯಾರನ್ನು ಕೊಂದು ಹಾಕಿದರೂ ವಿಚಾರಣೆಯ ಸೊಲ್ಲು ಕೇಳಿಬರದು. ಕೇರಳದಲ್ಲಿ ಸಾರ್ವಜನಿಕರೊಡನೆ ಒಂಟಾಗಿ ನಡಕೊಂಡರೆ ವಿಚಾರಣೆ, ಲಾಥಿ ಚಾರ್ಜ್ ಮಾಡಿದರೆ ವಿಚಾರಣೆ ನಡೆಯುತ್ತಿದೆ.

—o—

ಉತ್ತರ ಕನ್ನಡ ಜಿಲ್ಲೆಯ 'ಇಸ್ಕಸ್'

ಉತ್ತರ ಕನ್ನಡ ಜಿಲ್ಲೆಯಲ್ಲಿ ಇದೀಗ ಭಾರತ—ರಷ್ಯ ಮೈತ್ರಿ ಸಂಘ (ಇಸ್ಕಸ್)ದ ಶಾಖೆಯು ಆರಂಭವಾಗಿದೆ.

ಶಾಖೆಯ ಆರಂಭವನ್ನು ನಡೆಸಲು ಅಲ್ಲಿನ ನಾಗರಿಕರು ಪ್ರಯತ್ನಿಸಿದ್ದು ಅದೀಗ ಫಲಿಸಿದೆ. ಅಂಕೋಲೆಯಲ್ಲಿರುವ ಶ್ರೀ ದಯಾನಂದ ಎಸ್. ನಾಡಕರ್ಣಿಯರ ಮನೆಯಲ್ಲಿ ಈ ಬಗ್ಗೆ ಸಭೆ ಸೇರಿ 'ಇಸ್ಕಸ್'ನ ಅಧ್ಯಕ್ಷರಾಗಿ ಆರ್. ಎಂ. ಪ್ರಭುರವರನ್ನು ಕಾರ್ಯದರ್ಶಿಯಾಗಿ, ಬಿ. ಟಿ. [illegible]ದಂ, ಬಿ.ಎ.ಎಲ್ ಎಲ್.ಬಿ. ಇವರನ್ನು ಚುನಾಯಿಸಲಾಗಿದೆ.

ಶಾಖೆಯ ಮುಖ್ಯ ಕಾರ್ಯಾಲಯವು ಕಾರವಾರದಲ್ಲಿರಬೇಕೆಂದೂ, ಮುಂದೆ [illegible] ಭಾರತ-ಸೋವಿಯತ್ ಮೈತ್ರಿ ಸಂಘ[illegible] ಕೆಲಸ [illegible] ಬೇಕೆಂದೂ ಸಭೆಯಲ್ಲಿ ತೀರ್ಮಾನವಾಗಿದೆ.

ಸರಕಾರದ ಕಾರ್ಮಿಕ ದ್ರೋಹಿ ನೀತಿಯ ಖಂಡನೆ

— ನಗರದಲ್ಲಿ ಕಾರ್ಮಿಕ ಸಂಘಟನೆಗಳ ಸಂಯುಕ್ತ ಪ್ರತಿಭಟನೆ —

ಮಾರ್ಚಿ 11ರಂದು ಕೇಂದ್ರ ಸರಕಾರದ ನೌಕರರ ಸಂಘಗಳ ಸಂಯುಕ್ತ ಸಭೆಯನ್ನು ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ನಡೆಸಲಾಯಿತು. ಸರಕಾರದ ಕಾರ್ಮಿಕದ್ರೋಹಿ ನೀತಿಯನ್ನು ಖಂಡಿಸಿ ಹಲವಾರು ಸಂಘಗಳ ಪ್ರತಿನಿಧಿಗಳು ಭಾಷಣ ಗೈದರು.

ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ಸರಕಾರಿ ನೌಕರರ ಕನ್ ಫೆಡರೇಷನಿನ ಮಾಜಿ ಕಾರ್ಯದರ್ಶಿಯಾದ ಶ್ರೀ ಮಧುಸೂದನ್ ವಹಿಸಿದ್ದರು. ರೈಲ್ವೆ ನೌಕರರ ಸಂಘದ ಪ್ರತಿನಿಧಿಯಾದ ಶ್ರೀ ಗುರುಸ್ವಾಮಿ, ಬೆಂಗಳೂರಿನ ಕೇಂದ್ರದ ಕೈಗಾರಿಕೆ ನೌಕರರ ಸಂಘಗಳ ಫೆಡರೇಷನಿನ ಸಂಚಾಲಕರಾದ ಶ್ರೀ. ಎ.ಎನ್. ಸಿಂಗ್,ಕೆ.ಪಿ.ಟಿ. ಯು. ಸಿ. ಯ ಕಾರ್ಯದರ್ಶಿ ರವಾಗಿ ಎಂ. ಸಿ. ನರಸಿಂಹನ್, ಎಂ. ಎಲ್.ವಿ. ಇವರು ಸರಕಾರದ ಧೋರಣೆಯಲ್ಲಿ ಕೂಡಲೇ ಖಚಿತ ಬದಲಾವಣೆ ಯಾಗಬೇಕೆಂದು ಭಾಷಣ ಮಾಡಿದರು.

ಕೇಂದ್ರ ಸರಕಾರಿ ನೌಕರರು ಮುಷ್ಕರ ಹಿಂದೆಗೆದುಕೊಂಡಮೇಲೆ ಸರಕಾರವು ತಾನು ಭರವಸೆ ಇತ್ತ ಮೇರೆಗೆ ತಾತ್ಕಾಲಿಕ ಪರಿಹಾರವಿತ್ತಿಲ್ಲ. ಕೇಳಿಕೆಗಳನ್ನು ಪರಿಹರಿಸಿಲ್ಲ. ಬದಲು ಸರಕಾರಿ ನೌಕರರ ನಡವಳಿಕೆ ನಿಯಮಗಳಲ್ಲಿ, ಅತಿ ಪ್ರತಿಗಾಮಿಯಾದ, ಕಾನೂನು ವಿರುದ್ಧವಾದ ತಿದ್ದುಪಡಿಯನ್ನು ತಂದಿದೆ. 4 (a) ಮತ್ತು 4 (b) ಈ ತಿದ್ದುಪಡಿಯ ಪ್ರಕಾರ ಸರಕಾರಿ ನೌಕರರು ಪ್ರತಿಭಟನೆ, ಮೆರವಣಿಗೆ, ಮತ್ತು ಬ್ಯಾಡ್ಜ್ ಧರಿಸಿ ನಡೆಸುವ ಪ್ರಕ್ಷೋಭೆಗಳಾವುವನ್ನೂ ಮಾಡಬಾರದು. ಹಾಗೆ ಮಾಡಿದರೆ ಅವರ ಮೇಲೆ ಈ ತಿದ್ದುಪಡಿಯ ಸುತ್ತಿಗೆ ಏಟು ಬೀಳುವುದು. ಅವರನ್ನು ಕೆಲಸದಿಂದ ತೆಗೆದುಹಾಕಲಾಗುವುದು. ಎಂದು ಅಧ್ಯಕ್ಷರು ನುಡಿದರು.

ಹತ್ತಾರು ವರುಷಗಳ ಚಳವಳಿ ಮತ್ತು ಹೋರಾಟಗಳಿಂದ ಭಾರತದ ಕಾರ್ಮಿಕ ವರ್ಗಗಳಿದ್ದ ಹಕ್ಕುಬಾಧ್ಯತೆಗಳನ್ನು ಮೊಟಕು ಮಾಡುವುದೇ ಈ ತಿದ್ದುಪಡಿಯ ಗುರಿ. ಈ ತಿದ್ದುಪಡಿಯು ಕಾರ್ಮಿಕರು ಪಡೆದ ಟ್ರೇಡ್ ಯೂನಿಯನ್ ಸಂಘಟನೆ, ಮುಷ್ಕರ ಹೂಡುವ ಹಕ್ಕು ಇವುಗಳನ್ನು ಒಮ್ಮೆಲೇ ಇಲ್ಲದಂತಾಗಿಸುವುದು; ಮಾತ್ರವಲ್ಲ ಸಮಾನತೆ, ಸ್ವಾತಂತ್ರ್ಯಗಳನ್ನಿತ್ತ ನಮ್ಮ ಸಂವಿಧಾನವನ್ನು ಉಲ್ಲಂಘಿಸುವುದಾಗಿದೆ. ಇಂಥಾ ಪ್ರಗತಿ ವಿರೋಧಿ, ಘಟನಾ ವಿರೋಧಿ ಸರಕಾರದ ನೀತಿಯನ್ನು ದೇಶದ ಕಾರ್ಮಿಕ ವರ್ಗ ಸಂಯುಕ್ತವಾಗಿ ಪ್ರತಿಭಟಿಸಬೇಕೆಂದು ಭಾಷಣಕರ್ತರೆಲ್ಲರೂ ಒಕ್ಕೊರಲಿನ ಕರೆಯಿತ್ತರು.

ವಿಮಾನ ಕಾರ್ಖಾನೆ ನೌಕರರ ವಿವಾದ ಕೂಡಲೇ ಬಗೆಹರಿಯಲಿ

ವಿಮಾನ ಕಾರ್ಖಾನೆಯ ನೌಕರರ ಹೋರಾಟದಲ್ಲಿ ಸತ್ತ ಪಾಂಡ್ಯನ್ ಆಚಾರಯರು ಮತ್ತು ನಿಧನರಾದ ಮೌಲಾನಾ ಆಜಾದರಿಗೆ ಸಭೆಯು ಆರಂಭದಲ್ಲಿ ಒಂದು ನಿಮಿಷ ಮೌನತಳೆದು ಗೌರವ ಅರ್ಪಿಸಿತು.

ಆ ನಂತರ ಭಾಷಣ ಕರ್ತರೆಲ್ಲರೆ, ತಮ್ಮ ಭಾಷಣದಲ್ಲಿ ಸರಕಾರವು ವಿಮಾನ ಕಾರ್ಖಾನೆ ನೌಕರರ ವಿವಾದವನ್ನು ಶಾಂತಯುತವಾಗಿ ತಕ್ಷಣ ಇತ್ಯರ್ಥ ಮಾಡಬೇಕೆಂದು ಒತ್ತಾಯಿಸಿದರು.

ಶ್ರೀ. ನರಸಿಂಹನ್‌ರವರು, ವಿಮಾನ ಕಾರ್ಖಾನೆ ನೌಕರರ ವಿವಾದದ ಬಗ್ಗೆ ಇಲ್ಲಿನ ರಾಜ್ಯ ಸರಕಾರ ತೋರಿಸುತ್ತಿರುವ ಅಸಹಾಯತೆ ಮತ್ತು ಕೇಂದ್ರ ಸರಕಾರದ ಉದಾಸೀನತೆಯನ್ನು ಸ್ವಾರಸ್ಯವಾಗಿ ವಿವರಿಸಿದರು. ಮೈಸೂರಿನಲ್ಲಿ ಜನತೆಯ ಪ್ರತಿನಿಧಿ ಸರಕಾರವಿಲ್ಲ, ಬದಲು ವಿಮಾನ ಕಾರ್ಖಾನೆಯ ಜನರಲ್ ಮ್ಯಾನೇಜರ್ ಶ್ರೀ. ನಾಗೇಶ್‌ರದೇ ಸರ್ವಾಧಿಕಾರವಿದೆಯೆಂದೂ ತೀವ್ರವಾಗಿ ಖಂಡಿಸಿ ಮಾತಾಡಿದಾಗ ಸಭೆಯು ಒಪ್ಪಿಗೆಯ ಕೂಗೆಬ್ಬಿಸಿತು.

ನಿರ್ಣಯಗಳು

ಆ ಮೇಲೆ, ಸಭೆಯಲ್ಲಿ ಸರಕಾರವನ್ನು ಇಂದಿನ ಕಾರ್ಮಿಕ ದ್ರೋಹಿ ನೀತಿಯನ್ನು ಬದಲಾಯಿಸಬೇಕೆಂದು ಕೇಳಿಕೊಂಡು, ಕೇಂದ್ರ ಸರಕಾರಿ ನೌಕರರ ನಡವಳಿಯ ನಿಯಮಾವಳಿಗೆ ತಿದ್ದುಪಡಿಯಾಗಿ ತಂದಿರುವ 4 (ಎ) 4 (ಬಿ) ಯನ್ನು ಹಿಂದೆಗೆಯಬೇಕು ; ಜೀವನ ವೆಚ್ಚ ಅತ್ಯಧಿಕವಾಗಿದ್ದು ತಾತ್ಕಾಲಿಕ ಪರಿಹಾರ ಅವಶ್ಯವನ್ನು ಗುಣವಾಗಿ ಕೊಡಬೇಕು. ಈಗ ಇತ್ತಿರುವ ರೂ. 5 ಸಾಲದು ; ವಿಮಾನ ಕಾರ್ಖಾನೆ ನೌಕರರ ಹೋರಾಟಕ್ಕೆ ಸಭೆಯು ಬೆಂಬಲ ವೀಯುತ್ತದೆ ಮತ್ತು ಅವರ ವಿವಾದವು ಶಾಂತರೀತಿಯಲ್ಲಿ ಇತ್ಯರ್ಥವಾಗುವಂತೆ ಕೇಂದ್ರ ಸರಕಾರ ಮಧ್ಯೆ ಪ್ರವೇಶಿಸಬೇಕು ಎಂದು ಕೇಂದ್ರ ಸರಕಾರವನ್ನು ಒತ್ತಾಯಿಸುವ ನಿರ್ಣಯಗಳು ಸಭೆಯು ಮಂಜೂರಾತಿ ಪಡೆದುವು.

ಪೋಲೀಸ್ ಸ್ಟೇಷನ್ನಿನಲ್ಲಿ ಅತ್ಯಾಚಾರ

ವಿಧಾನ ಸಭೆಯ ನಿಲುವಳಿ ಸೂಚನೆ

ಬೆಂಗಳೂರಿನ ಶೇಷಾದ್ರಿಪುರಂ ಪೋಲೀಸ್ ಸ್ಟೇಷನ್ನಿನಲ್ಲಿ ಪೋಲೀಸರ ಅತ್ಯಾಚಾರದ ಫಲವಾಗಿ ಮುನಿಯಮ್ಮ ಎಂಬ ಶ್ರೀರಾಂಪುರದ ಯುವತಿ ಮೃತಳಾದ ಸುದ್ದಿ ಎಲ್ಲರಿಗೂ ತಿಳಿದಿದೆ. ಸದರಿ ಮುನಿಯಮ್ಮ ಎಂಬುವವಳನ್ನು ಶೇಷಾದ್ರಿಪುರದ ಪೋಲೀಸರು ಫೆಬ್ರುವರಿ 18ರಂದು ದಸ್ತಗಿರಿಮಾಡಿ ಪೋಲೀಸು ಠಾಣೆಯಲ್ಲಿ ಆಕೆಯ ಮೇಲೆ ಅತ್ಯಾಚಾರ ನಡೆಸಿದರೆಂದು ಪರಿಣಾಮವಾಗಿ ಫೆಬ್ರುವರಿ 28 ರಂದು ಆಕೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಳಾದಳೆಂದೂ ಆಪಾದಿಸಲಾಗಿದೆ.

ಈ ಬಗ್ಗೆ ವಿಧಾನ ಸಭೆಯಲ್ಲಿ ಮೂರು ನಿಲುವಳಿಸೂಚನೆಗಳು ಬಂದಿದ್ದು, ಅದರ ಬಗ್ಗೆ ಅಧ್ಯಕ್ಷರ ರೂಲಿಂಗ್ ಎದುರು ಕಾಯುತ್ತಿದೆ. ಮಾರ್ಚ ೧೦ ರಂದು ವಿಧಾನ ಸಭೆಯಲ್ಲಿ ನಿಲುವಳಿ ಸೂಚನೆಗಳನ್ನು ಓದಿಯಾದನಂತರದಲ್ಲಿ, ಅದರ ಬಗ್ಗೆ ಗೊಂದಲವೇ ಎದ್ದಿತು. ಗೃಹಸಚಿವ ಪೂಣಚ್ಚರವರು ಹೇಳಿಕೆಯೊಂದನ್ನೀಯಲು ಎದ್ದುನಿಂತು, ಅರ್ಧದಲ್ಲೇ ನಿಲ್ಲಿಸಬೇಕಾಯಿತು. ಅವರು ಈ ವಿಷಯದಲ್ಲಿ ತನಿಖೆಯನ್ನು ವಿಶೇಷ ನ್ಯಾಯಾಧೀಶರು ನಡೆಸುತ್ತಿದ್ದಾರೆಂದೂ, ಕೋರ್ಟಿಗೆ ಎಫ್. ಐ. ಆರ್. ಕಳಿಸಲಾಗಿದೆಯೆಂದೂ ತಿಳಿಸಿದರು. ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಿದರೆ ಸಬ್ ಜುಡಿಸ್ ಆಗುವುದೆಂದು ಅವಾಂತರವುಂಟಾಗಿ, ಸಭೆಯಲ್ಲಿ ಹಾಜರಿದ್ದ ಅಡ್ವೊಕೇಟ್ ಜನರಲ್‌ರವರ ಅಭಿಪ್ರಾಯವನ್ನು ಪಡೆಯಲು ಸಭೆ ಒಪ್ಪಿಗೆಯಿತ್ತಿತು. ಮಾರನೆಯ ದಿನ ಅಡ್ವೊಕೇಟ್ ಜನರಲ್‌ರವರು ತಮ್ಮ ಅಭಿಪ್ರಾಯವೀಯುತ್ತ 'ಮುನಿಯಮ್ಮ ಎಂಬಾಕೆಯ ಸಾವಿನ ಬಗ್ಗೆ ಒಳಾಡಳಿತ ಸಚಿವರಿಗೆ ಬಂದು ಅರ್ಜಿಸಲ್ಲಿಸಲಾಯಿತು ಮತ್ತು ಅವರ ಪ್ರತಿಬಂದನ್ನು ಐ.ಜಿ ಪಿ.ಗೆ ಕಳಿಸಲಾಗಿತ್ತು..........ಡಿ.ಎಸ್.ಪಿ. ಯವರು ಈ ವಿಷಯ ಮ್ಯಾಜಿಸ್ಟ್ರೇಟರಿಂದ ವಿಚಾರಣೆಯಾಗತಕ್ಕದೆಂದು ಅಭಿಪ್ರಾಯ ಪಟ್ಟ ಮೇಲೆ, ಕ್ರಿಮಿನಲ್ ಪ್ರೊಸೀಜರ್ ಕೇಸ್ 174 ಮತ್ತು 176ನೆ ನಂ. ಪ್ರಕಾರ ಎಕ್ಸ್ಅಫಿಯೋ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರು ಕ್ರಮ ತೆಗೆದುಕೊಂಡಿರುತ್ತಾರೆ' ಎಂದು ತಿಳಿಸಿ, ಆ ವಿಷಯವನ್ನು ಸಭೆಯಲ್ಲಿ ಚರ್ಚಿಸಿದರೆ ಸಬ್‌ಜುಡಿಸ್ ಆಗುವುದೆಂದು ಅಭಿಪ್ರಾಯವಿತ್ತರು. ಈ ಅಭಿಪ್ರಾಯಕ್ಕೆ ವಿರೋಧವಾಗಿ ವಿಷಯ ಚರ್ಚಿಸಿದಲ್ಲಿ ಅದು ಸಬ್‌ಜುಡಿಸ್ ಆಗುವುದಿಲ್ಲವೆಂದೂ, ಇದು ವಿಚಾರಣೆಯು ಹೊರತಾಗಿ ಕೋರ್ಟು ಸಂಪೂರ್ಣವಾಗಿ ಕೇಸನ್ನು ಕೈಗೆ ತೆಗೆದುಕೊಂಡಿಲ್ಲವೆಂದೂ ವಿರೋಧ ಪಕ್ಷದ ಸದಸ್ಯರು ವಾದಿಸಿದರು. ಸಭಾಧ್ಯಕ್ಷರು ಈ ಬಗ್ಗೆ ತಮ್ಮ ರೂಲಿಂಗ್ ಇನ್ನು ಇಷ್ಟರಲ್ಲೇ ಕೊಡಲಿದ್ದಾರೆ.

ಪೋಲೀಸರಿಂದ ಅತ್ಯಾಚಾರ ನಡೆದ ಪರಿಣಾಮವಾಗಿ ಮಹಿಳೆಯೊಬ್ಬಳ ಸಾವು ಸಂಭವಿಸಿರುವುದು ಸಾರ್ವಜನಿಕರನ್ನು ಕಳವಳಕ್ಕೀಡು ಮಾಡಿದೆ. ಈ ವಿಷಯದ ಬಗ್ಗೆ ಸರಕಾರವು ಸೂಕ್ತ ವಿಚಾರಣೆ ಕಾರ್ಯಕ್ರಮ ತೆಗೆದುಕೊಂಡು ವಿಧಾನ ಸಭೆಯ ಮುಂದೆ ವಿಷಯಗಳನ್ನು ಮಂಡಿಸಿದ್ದಲ್ಲಿ ಉತ್ತಮವಿರುತ್ತಿತ್ತು. ಸರಕಾರ ಈಗಲಾದರೂ ವಿವರ ಕೊಡಲಿ ಎಂದು ಒತ್ತಾಯ ಪಡಿಸುತ್ತೇವೆ ಮತ್ತು ಕೂಡಲೆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದೂ ಒತ್ತಾಯ ಪಡಿಸುತ್ತೇವೆ.

ಕವಿ ವಳ್ಳತ್ತೋಳರು ಅಮರರಾದರು

ಕೇರಳದ ಪ್ರಸಿದ್ಧ ಗೌರವಾನ್ವಿತ ಕವಿಗಳಾದ ಶ್ರೀ ವಳ್ಳತ್ತೋಳ್ ನಾರಾಯಣ ಮೆನನರು ಮಾರ್ಚ್ 13ನೇ ರಾತ್ರಿ 10 ಘಂಟೆಗೆ ನಿಧನರಾದರು.

ವಳ್ಳತ್ತೋಳರು ಕೇರಳದ ಪ್ರಾಚೀನ ಸಂಸ್ಕೃತಿಯ ಕುರುಹಾದ ಕಥಕ್ಕಳಿ (ಜಾನಪದ) ನೃತ್ಯ ಕಲೆಯ ನವನಿರ್ಮಾಣ ನಿರೂಪಕರಾಗಿದ್ದರು. ಅವರ ಇಡೀ ಮನೆತನವೇ ಸಾಹಿತ್ಯ—ಸಂಸ್ಕೃತಿಗಳ ತವರು ಮನೆಯಾಗಿದೆ. ವಳ್ಳತ್ತೋಳರ ಮಕ್ಕಳು ಮತ್ತು ಅಳಿಯಂದಿರು ಕೇರಳದ ಪ್ರಸಿದ್ಧ ಪ್ರಗತಿಶೀಲ ಲೇಖಕರಾಗಿದ್ದಾರೆ. ಅವರ ಹೆಣ್ಣು ಮಕ್ಕಳಿಬ್ಬರು ಕಥಕ್ಕಳಿ ನೃತ್ಯದ ಅತ್ಯುತ್ತಮ ಅಭಿನಯಶೀಲರಾಗಿದ್ದಾರೆ. ಸ್ವತಃ ವಳ್ಳತ್ತೋಳರೇ ಕಥಕ್ಕಳಿಯ ನಾಟಕ ರಂಗವೊಂದನ್ನು ಸ್ಥಾಪಿಸಿದ್ದರು. ಅದು ಕೇರಳದಲ್ಲೇ ಅಲ್ಲ, ಇಡೀ ಭಾರತದಲ್ಲೇ ಪ್ರಸಿದ್ಧವಾಗಿತ್ತು. ಕೆಲವು ಸಮಯದ ಹಿಂದೆ ಮದರಾಸು ಸರಕಾರವು ದಕ್ಷಿಣ ಭಾರತದ ಭಾಷೆಗಳ ಐವರು ಕವಿಗಳಿಗೆ ಗೌರವ ಧನವಾಗಿ ವರ್ಷಕ್ಕೆ ಒಂದು ಸಾವಿರ ರೂಪಾಯಿ ನೀಡಿದ್ದಾಗ, ಮಲೆಯಾಳ ಭಾಷೆಯಲ್ಲಿ ವಳ್ಳತ್ತೋಳ್ ಆರಿಸಲ್ಪಟ್ಟಿದ್ದರು. ರಾಷ್ಟ್ರೀಯ ಚಳುವಳಿಯ ಕಾಲದಲ್ಲಿ ವಳ್ಳತ್ತೋಳ್ ರಚಿಸಿರುವ ಸ್ವಾತಂತ್ರ್ಯಾಕಾಂಕ್ಷೆಯ ಅನೇಕ ಹಾಡುಗಳು ಇಂದಿಗೂ ಕೇರಳ ಜನತೆಯ ಬಾಯಲ್ಲಿವೆ.

ವಳ್ಳತ್ತೋಳರು ಇಂಗ್ಲೀಷ್ ಭಾಷೆಯನ್ನು ಅರಿಯರು, ಹಿಂದಿಯಾಗಲೀ ಉರ್ದುವಾಗಲಿ ಅವರಿಗೆ ಗೊತ್ತಿರಲಿಲ್ಲ. ಹಾಗಿದ್ದರೂ ಅವರು ರಚಿಸಿದ ರಚನೆಗಳು ಇಂದು ಹಲವಾರು ಭಾಷೆಗಳಲ್ಲಿ ತರ್ಜುಮೆಗೊಂಡಿವೆ. ಹಲವಾರು ಭಾಷೆಯ ಜನರಿಗೆ ಅವರು ಪರಿಚಿತರಾಗಿದ್ದಾರೆ.

ಸಾಯುವಾಗ ವಳ್ಳತ್ತೋಳರಿಗೆ 79 ವರುಷ ವಯಸ್ಸಾಗಿತ್ತು. ಈಚಿನ ಕೆಲವು ವರುಷಗಳಿಂದ ಅವರಿಗೆ ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲ, ಕಿವಿಯೂ ಕೇಳಿಸುತ್ತಿರಲಿಲ್ಲ.

ಪ್ರಸಿದ್ಧ ರಾಷ್ಟ್ರ ಕವಿಗಳಲ್ಲೊಬ್ಬರಾದ ವಳ್ಳತ್ತೋಳರಿಗೆ ಜನಶಕ್ತಿಯು ಅಂತಿಮ ಗೌರವವನ್ನು ಸಲ್ಲಿಸುತ್ತದೆ.

REG. No. M. 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore 2 phone 3810